# ಸಮಾಜ ವಿಜ್ಞಾನ

# SOCIAL SCIENCE

## KANNADA MEDIUM

## ಎಂಟನೆಯ ತರಗತಿ

## STANDARD EIGHT

## ಅವಧಿ III

## Term III


**Texbook Team**

**TRANSLATORS**

Thiru. S. Gurukarappa,
P.G. Assistant,
Govt. Higher Secondary School,
Thalavadi, Erode District.

Thiru. D. Kalappa,
B.T. Assistant,
Govt. Higher Secondary School,
Panakahalli, Erode District.

Thiru. S. Shivalinga,
B.T. Assistant,
Govt. Higher Secondary School,
Panakahalli, Erode District.

Thiru. M. Jadeswamy,
B.T. Assistant,
Govt. High School,
Chikkahalli, Erode District.

**REVIEWER**

Thiru. M. Basavanna,
P.G. Assistant,
Govt. Higher Secondary School,
Panakahalli, Erode District.



Laser Typeset,Illustrations: T.Raghu & M.Vijayasarathy

# 1. ಲಾರ್ಡ್ ವಿಲಿಯಂ ಬೆಂಟಿಂಕ್ (ಕ್ರಿ.ಶ. 1828 – ಕ್ರಿ.ಶ. 1835)

ಲಾರ್ಡ್ ಹೇಸ್ಟಿಂಗ್ಸ್‌ನ ನಂತರ ಅರ್ಮ್‌ಹರ್ಸ್ಟ್‌ನು ಗವರ್ನರ್ ಜನರಲ್ ಆಗಿ ಅಧಿಕಾರ ವಹಿಸಿಕೊಂಡನು. ಇವನ ಅಧಿಕಾರದ ಅವಧಿಯಲ್ಲಿ ಬರ್ಮೀಯರು ಅಸ್ಸಾಂನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು. ಇದರಿಂದ ಲಾರ್ಡ್ ಅರ್ಮ್‌ಹರ್ಸ್ಟ್‌ನ್ ಕ್ರಿ.ಶ. 1824 ರಲ್ಲಿ ಬರ್ಮನ್ನರ ಮೇಲೆ ಯುದ್ಧ ಘೋಷಿಸಿದನು. ಇದನ್ನು ಮೊದಲನೇ ಬರ್ಮಾ ಯುದ್ಧ ಎಂದು ಕರೆಯುವರು. ಈ ಯುದ್ಧದಲ್ಲಿ ಬ್ರಿಟಿಷರು ಬರ್ಮಿಯರನ್ನು ಸೋಲಿಸಿದರು. ಈ ಯುದ್ಧವು ಕ್ರಿ.ಶ. 1826 ರಲ್ಲಿ ಯಾಂಡ್‌ಬೂ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಬ್ರಿಟಿಷರು ಅರಕ್ಕಾನ್ ಮತ್ತು ಟೆನಾಸೆರಿಂ ಭಾಗಗಳನ್ನು ವಶಪಡಿಸಿಕೊಂಡರು.

ಲಾರ್ಡ್ ಅರ್ಮ್‌ಹರ್ಸ್ಟ್‌ನ ನಂತರ ಲಾರ್ಡ್ ವಿಲಿಯಂ ಬೆಂಟಿಂಕ್ ಅಧಿಕಾರ ವಹಿಸಿಕೊಂಡನು. ಇವನು ಭಾರತದ ದೇಶೀಯ ರಾಜರುಗಳ ತಟಸ್ಥ ನೀತಿ ಸಿದ್ಧಾಂತವನ್ನು ಅನುಸರಿಸಿದನು. ಇವನ ಸುಧಾರಣೆಗಳಿಂದಾಗಿ ಈತನು ಪ್ರಸಿದ್ಧನಾದನು. ಹೀಗಾಗಿ ಭಾರತದ ಗವರ್ನರ್ ಜನರಲ್‌ಗಳಲ್ಲಿ ಇವನೊಬ್ಬ ಶ್ರೇಷ್ಠ ಗವರ್ನರ್ ಜನರಲ್ ಎಂದು ಅಭಿಪ್ರಾಯ ಪಡಲಾಗಿದೆ. ಇವನ ಸುಧಾರಣೆಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

## ಹಣಕಾಸು ಸುಧಾರಣೆಗಳು

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಹಣಕಾಸು ಸ್ಥಿತಿಯನ್ನು ಅಭಿವೃದ್ಧಿ ಪಡಿಸಲು ನಾಗರೀಕ ಸೇವಾ ನೌಕರರ ವೇತನವನ್ನು ಕಡಿಮೆ ಮಾಡಲಾಯಿತು. ಇವನು ಭಾರತೀಯರನ್ನು ಕಡಿಮೆ ವೇತನದಲ್ಲಿ ನೌಕರರನ್ನು ನೇಮಿಸಿದನು. ಇವನು ಅಫೀಮು ವ್ಯಾಪಾರವನ್ನು ಕ್ರಮಪಡಿಸಿ ಅಧಿಕ ಲಾಭವನ್ನು ಗಳಿಸಿದನು. ಸೇನಾಧಿಕಾರಿಗಳಿಗೆ ನೀಡುತ್ತಿದ್ದ ಭತ್ಯೆಯನ್ನು ಕಡಿಮೆ ಮಾಡಿದನು.

## ನ್ಯಾಯಾಂಗ ಸುಧಾರಣೆಗಳು

ಪ್ರಾಂತೀಯ ಅಪೀಲು ನ್ಯಾಯಾಲಯಗಳನ್ನು ವಿಸರ್ಜಿಸಿದನು. ಸಿವಿಲ್ ಮೊಕದ್ದಮೆಗಳ ವಿಚಾರಣೆಗಾಗಿ ಸದರ್ ದಿವಾನಿ ಅದಾಲತ್ (ಸಿವಿಲ್ ನ್ಯಾಯಾಲಯಗಳು) ಮತ್ತು ಕ್ರಿಮಿನಲ್ ಮೊಕದ್ದಮೆಗಳಿಗಾಗಿ ಸದರ್ ನಿಜಾಮತ್ ಅದಾಲತ್ (ಕ್ರಿಮಿನಲ್ ನ್ಯಾಯಾಲಯ) ಅಪೀಲು ನ್ಯಾಯಾಲಯಗಳನ್ನು ಅಲಹಾಬಾದಿನಲ್ಲಿ ಸ್ಥಾಪಿಸಿದನು.

## ಆಡಳಿತ ಸುಧಾರಣೆಗಳು

ಲಾರ್ಡ್ ವಿಲಿಯಂ ಬೆಂಟಿಂಕನು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾಧಿಕಾರಿಗಳ ಹುದ್ದೆಯನ್ನು ವಿಲೀನಗೊಳಿಸಿದನು. ಸೇನೆಯ ಮುಖ್ಯ ನಾಯಕತ್ವವನ್ನು ಇವನೇ ವಹಿಸಿಕೊಂಡು ಹಲವು ಸುಧಾರಣೆಗಳನ್ನು ಜಾರಿಗೊಳಿಸಿದನು. ಭಾರತದ ನ್ಯಾಯಾಲಯಗಳಲ್ಲಿ ಬಳಸುತ್ತಿದ್ದ ಪರ್ಷಿಯನ್ ಭಾಷೆಯನ್ನು ರದ್ದುಗೊಳಿಸಿ ದೇಶೀಯ ಭಾಷೆಯನ್ನು ಜಾರಿಗೆ ತಂದನು. ಗವರ್ನರ್ ಜನರಲ್‌ನ ಆಡಳಿತ ಮಂಡಲಿಗೆ ಹೊಸದಾಗಿ ಕಾನೂನು ಸದಸ್ಯರೊಬ್ಬರನ್ನು ನೇಮಕ ಮಾಡಿದನು. ಹೀಗಾಗಿ ಲಾರ್ಡ್ ಮೆಕಾಲೆಯು ಮೊದಲನೇ ಕಾನೂನು ಸದಸ್ಯನಾಗಿ ನೇಮಕಗೊಂಡವನಾಗಿರುವನು.

## ಸಾಮಾಜಿಕ ಸುಧಾರಣೆಗಳು

ಭಾರತದಲ್ಲಿ ಲಾರ್ಡ್ ವಿಲಿಯಂಬೆಂಟಿಂಕನ ಹೆಸರು ಚಿರಸ್ಥಾಯಿಯಾಗಿರುವುದಕ್ಕೆ ಅವನು ಜಾರಿಗೆ ತಂದ ಸಾಮಾಜಿಕ ಸುಧಾರಣೆಗಳಾಗಿವೆ.

## ಸತಿಪದ್ಧತಿ ನಿರ್ಮೂಲನೆ

ಹಿಂದೂ ಸಮಾಜದಲ್ಲಿ ಅನೇಕ ಮೂಢನಂಬಿಕೆ ಹಾಗೂ ಅರ್ಥಹೀನ ಸಂಪ್ರದಾಯಗಳು ಆಚರಣೆಯಲ್ಲಿದ್ದವು. ಅವುಗಳಲ್ಲಿ ಸತಿಪದ್ಧತಿ ಒಂದು ಕ್ರೂರ ಪದ್ಧತಿಯಾಗಿತ್ತು. ಈ ಪದ್ಧತಿಯು ಪತಿ ತೀರಿಕೊಂಡರೆ ಅವನ ಸಂಸ್ಕಾರದ ಅಗ್ನಿಯಲ್ಲಿ ಸ್ವಪ್ರೇರಣೆಯಿಂದ ತನ್ನ ಉಡುಪು ಹಾಗೂ ತೊಟ್ಟ ಆಭರಣಗಳನ್ನು ತೆಗೆದಿಟ್ಟು ಅವನ ಸತಿಯೂ ಅಗ್ನಿ ಪ್ರವೇಶಿಸಿ ಪ್ರಾಣ ತ್ಯಾಗ ಮಾಡುವುದು ಸತಿಪದ್ಧತಿ. ದಿನ ಕಳೆದಂತೆ ವಿಧವೆ, ಸಂಬಂಧಿಕರ ಒತ್ತಾಯದಿಂದ (ಬಲವಂತ) ಸತಿ ಪದ್ಧತಿಗೆ ಒಳಗಾಗಬೇಕಾಯಿತು. ಆ ವೇಳೆಗೆ ಈ ಸಂಪ್ರದಾಯವು ರಜಪೂತರಲ್ಲಿ

ಕಾಣಿಸಿಕೊಂಡಿತು. ಈ ಅಮಾನವೀಯ ಪದ್ಧತಿಯನ್ನು ಬೆಂಟಿಂಕ್‌ನು ಕಟುವಾಗಿ ಖಂಡಿಸಿದನು. ಬೆಂಟಿಂಕನು ಸಮಾಜ ಸುಧಾರಕರಾದ ರಾಜಾರಾಂ ಮೋಹನ್‌ರಾಯ್ ರವರ ಸಹಾಯದಿಂದ 1829 ರಲ್ಲಿ ಸತಿ ಸಹಗಮನ ಪದ್ಧತಿ ನಿರ್ಮೂಲನಾ ಶಾಸನವನ್ನು ಜಾರಿಗೆ ತಂದನು. ಸತಿ ಪದ್ಧತಿಗಾಗಿ ಯಾವುದೇ ರೀತಿಯ ಪ್ರಚೋದನೆ ಅಥವಾ ಬಲಾತ್ಕಾರದಿಂದ ಪ್ರೇರೇಪಿಸಿದವರು, ಸತಿ ಪದ್ಧತಿಗೆ ಸಂಬಂಧಪಡುವವರೆಲ್ಲರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು.

## ಹೆಣ್ಣು ಶಿಶುಹತ್ಯೆ ನಿರ್ಮೂಲನೆ

ಹೆಣ್ಣು ಶಿಶು ಹತ್ಯೆಯು ಕಾಥೇವಾಡ ಮತ್ತು ರಾಜಸ್ಥಾನದಲ್ಲಿನ ಬುಡಕಟ್ಟು ಜನಾಂಗದವರಲ್ಲಿ ಕಾಣಿಸಿಕೊಂಡ ಮತ್ತೊಂದು ಕೆಟ್ಟ ಸಂಪ್ರದಾಯವಾಗಿದೆ. ಹೆಣ್ಣು ಶಿಶು ಹುಟ್ಟಿದಾಗಲೇ ಅದನ್ನು ಹತ್ಯೆ ಮಾಡುವುದು ಇವರ ಸಂಪ್ರದಾಯವಾಗಿತ್ತು. ಏಕೆಂದರೆ ಹೆಣ್ಣು ಶಿಶು ಹುಟ್ಟಿದರೆ ಹೆಚ್ಚಿನ ಆರ್ಥಿಕ ಹೊರೆಯಾಗುವುದೆಂದು ಹೆಣ್ಣು ಶಿಶು ಹುಟ್ಟಿದಾಗಲೇ ಅದನ್ನು ಹತ್ಯೆ ಮಾಡಲಾಗುತ್ತಿತ್ತು.

ಇದರಿಂದಾಗಿ ಲಾರ್ಡ್ ವಿಲಿಯಂ ಬೆಂಟಿಂಕ್ ಈ ಕೆಟ್ಟ ಸಂಪ್ರದಾಯವನ್ನು ನಿರ್ಮೂಲನೆಗೊಳಿಸಿ ಹೀಗೆ ಆಚರಣೆಯಲ್ಲಿ ತೊಡಗಿದರೆ ಅದನ್ನು ಅಪರಾಧ ಎಂದು ಘೋಷಿಸಿದನು.

## ನರಬಲಿ ನಿರ್ಮೂಲನೆ

ಒರಿಸ್ಸಾದ ಬುಡಕಟ್ಟು ಜನಾಂಗದವರಲ್ಲಿ ಕಾಣಿಸಿಕೊಂಡ ಒಂದು ಕ್ರೂರ ಸಂಪ್ರದಾಯ ನರಬಲಿಕೊಡುವುದಾಗಿದೆ. ಇವರು ತಮ್ಮ ದೇವರು ಮತ್ತು ದೇವತೆಯನ್ನು ತೃಪ್ತಿ ಪಡಿಸಲು ನರಬಲಿ ಕೊಡುತ್ತಿದ್ದರು. ಲಾರ್ಡ್‌ವಿಲಿಯಂಬೆಂಟಿಂಕನು ಅಂದಿನ ಸಮಾಜದಲ್ಲಿ ಅಸ್ಥಿತ್ವದಲ್ಲಿದ್ದ ಅನಾಗರೀಕ ಆಚರಣೆಯನ್ನು ಆಚರಿಸದಂತೆ ಕ್ರಮ ಕೈಗೊಂಡನು. ಇಂತಹ ಆಚರಣೆಯನ್ನು ಅನುಸರಿಸುವವರನ್ನು ಅಪರಾಧಿಗಳೆಂದು ಘೋಷಿಸಲಾಗುತ್ತಿತ್ತು.

## ಠಕ್ಕರ ನಿಗ್ರಹ

ಠಕ್ಕರು ಮಧ್ಯ ಭಾರತದಲ್ಲಿ ವಾಸಿಸುತ್ತಿದ್ದ ಸುಲಿಗೆಕಾರರ ಗುಂಪು. ಇವರ ಕಸಬು ಲೂಟಿ ಮಾಡುವುದಾಗಿತ್ತು. ಮುಗ್ಧ ಜನರು ಮತ್ತು ಪ್ರಯಾಣಿಕರನ್ನು ಕೊಂದು ಅವರ ಸಂಪತ್ತನ್ನು ದೋಚುತ್ತಿದ್ದರು. ಲಾರ್ಡ್ ವಿಲಿಯಂ ಬೆಂಟಿಂಕನು ಇವರ ದುಷ್ಟ ಆಚರಣೆಯನ್ನು ತಡೆಯಲು ಮೇಜರ್ ಸ್ಲೀಮನ್ ನೇತೃತ್ವದಲ್ಲಿ ಹೊಸ ಇಲಾಖೆಯೊಂದನ್ನು ಸ್ಥಾಪಿಸಿ ಠಕ್ಕರ ತಂಡಗಳನ್ನು ಸಂಪೂರ್ಣವಾಗಿ ನಾಶಗೊಳಿಸಲಾಯಿತು.

## ಶೈಕ್ಷಣಿಕ ಸುಧಾರಣೆಗಳು

ಕ್ರಿ.ಶ. 1813 ರಲ್ಲಿ ಚಾರ್ಟರ್ ಕಾಯಿದೆಯಂತೆ ಮೀಸಲಿಟ್ಟ ಹಣ ಇಂಗ್ಲೀಷ್ ಭಾಷೆ ಮೂಲಕ ಪಾಶ್ಚಾತ್ಯ ಶಿಕ್ಷಣ ಬೆಳವಣಿಗೆಗೆ ಬಳಸಿಕೊಳ್ಳಲಾಯಿತು. ಇದರ ಪರಿಣಾಮವಾಗಿ ಲಾರ್ಡ್‌ವಿಲಿಯಂಬೆಂಟಿಕನು ಇನ್ನು ಮುಂದೆ ಭಾರತೀಯ ಶಿಕ್ಷಣ ಮಾಧ್ಯಮ ಭಾಷೆ ಇಂಗ್ಲೀಷ್ ಎಂಬುದಾಗಿ ಘೋಷಿಸಿದನು. ಕಲ್ಕತ್ತದಲ್ಲಿ ಮೆಡಿಕಲ್ ಕಾಲೇಜು ಮತ್ತು ಬೊಂಬಾಯಿಯಲ್ಲಿ ಎಲ್ಫಿನ್‌ಸ್ಟನ್ ಕಾಲೇಜನ್ನು ಸ್ಥಾಪಿಸಿದನು.

## 1833 ರ ಚಾರ್ಟರ್ ಕಾಯಿದೆ

ಲಾರ್ಡ್ ವಿಲಿಯಂ ಬೆಂಟಿಂಕ್‌ನು 1833 ರಲ್ಲಿ ಚಾರ್ಟರ್ ಕಾಯಿದೆಯನ್ನು ಜಾರಿಗೊಳಿಸಿದನು.

ಈ ಕಾಯಿದೆ ಪ್ರಕಾರ ಕಂಪನಿಯ ಏಕಸ್ವಾಮ್ಯತ್ವವನ್ನು ರದ್ದು ಪಡಿಸಲಾಯಿತು. ಬಂಗಾಳದ ಗವರ್ನರ್ ಜನರಲ್‌ನು ಭಾರತದ ಗವರ್ನರ್ ಜನರಲ್ ಆದನು. ಗವರ್ನರ್‌ಜನರಲ್‌ನ ಸಲಹಾ ಸಮಿತಿಗೆ ಕಾನೂನು ಸದಸ್ಯನ ಸೇರ್ಪಡೆಯಾಯಿತು. ಮದ್ರಾಸ್, ಬೊಂಬಾಯಿ, ಕಲ್ಕತ್ತಗಳಿಗೆ ಕ್ರೈಸ್ತರ ಕಲ್ಯಾಣಕ್ಕಾಗಿ ಬಿಷಪ್ಪರುಗಳನ್ನು ನೇಮಕ ಮಾಡಲಾಯಿತು.

## ವ್ಯಕ್ತಿತ್ವ

ಲಾರ್ಡ್‌ವಿಲಿಯಂಬೆಂಟಿಂಕ್ ಸಾಮಾಜಿಕ, ಆಡಳಿತ, ಹಣಕಾಸು ಮತ್ತು ನ್ಯಾಯಾಂಗ ಕ್ಷೇತ್ರಗಳಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದನು. ಇವನು ಭಾರತೀಯರ ಮೇಲೆ ಹೆಚ್ಚಿನ ಆಸಕ್ತಿ

ವಹಿಸಿದ್ದರಿಂದ ಇವನನ್ನು ಲಾರ್ಡ್‌ರಿಪ್ಪನ್ನನ ಜೊತೆ ಹೋಲಿಸಲಾಗಿದೆ. ಭಾರತದಲ್ಲಿ ಇಂಗ್ಲೀಷ್ ಶಿಕ್ಷಣ ಬೆಳವಣಿಗೆ ಭಾರತೀಯರ ಕಲ್ಯಾಣಾಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ಕೈಗೊಂಡನು.

## ಅಭ್ಯಾಸ

### I) ಸರಿಯಾದ ಉತ್ತರವನ್ನು ಆರಿಸಿರಿ.

1. ಲಾರ್ಡ್ ಅಮ್ಹರ್ಸ್ಟ್ ನ ನಂತರ ____________ ನು ಭಾರತದ ಗವರ್ನರ್‌ಜನರಲ್ ಆಗಿ ಅಧಿಕಾರ ವಹಿಸಿಕೊಂಡನು.

   ಅ) ಲಾರ್ಡ್‌ವಿಲಿಯಂಬೆಂಟಿಂಕ್ ಆ) ಲಾರ್ಡ್‌ಹೇಸ್ಟಿಂಗ್ಸ್ ಇ) ಲಾರ್ಡ್‌ಕರ್ಜನ್

2. ಲಾರ್ಡ್‌ವಿಲಿಯಂಬೆಂಟಿಂಕ್ ____________ ಮೂಲಕ ಪ್ರಸಿದ್ಧನಾದನು.

   ಅ) ನೋಟ ಆ) ಯುದ್ಧಗಳ ಇ) ಸುಧಾರಣೆಗಳ

3. ನ್ಯಾಯಾಲಯದ ಭಾಷೆಯಾಗಿ ಬಳಸುತ್ತಿದ್ದ ____________ ಭಾಷೆ ರದ್ದು ಪಡಿಸಲಾಯಿತು.

   ಅ) ಇಂಗ್ಲೀಷ್ ಆ) ಪರ್ಷಿಯನ್ ಇ) ಸಂಸ್ಕೃತ

4. ನರಬಲಿ ಆಚರಣೆಯನ್ನು ____________ ದವರು ಅನುಸರಿಸುತ್ತಿದ್ದರು.

   ಅ. ಒರಿಸ್ಸಾದ ಬುಡಕಟ್ಟು ಜನಾಂಗ ಆ) ರಜಪೂತರು ಇ) ಮಧ್ಯ ಭಾರತದ ಜನರು

### II) ಬಿಟ್ಟ ಸ್ಥಳಗಳನ್ನು ತುಂಬಿರಿ.

1. ಮೊದಲನೇ ಬರ್ಮೀಯರ ಯುದ್ಧ ಕ್ರಿ.ಶ. 1826 ರಲ್ಲಿ ____________ ಒಪ್ಪಂದದಂತೆ ಕೊನೆಗೊಂಡಿತು.
2. ____________ ನನ್ನು ಭಾರತದ ಪ್ರಸಿದ್ಧ ಗರ್ವನರ್‌ಜನರಲ್‌ಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.
3. ____________ ನು ಭಾರತದ ಗವರ್ನರ್‌ಜನರಲ್ ಸಲಹಾ ಸಮಿತಿಯ ಮೊದಲನೇ ಕಾನೂನು ಸದಸ್ಯ.
4. ಭಾರತದ ಸಮಾಜದಲ್ಲಿದ್ದ ಅತ್ಯಂತ ಕ್ರೂರ ಪದ್ಧತಿ ____________ ಆಗಿದೆ.

### III) ಹೊಂದಿಸಿರಿ.

| | | |
|---|---|---|
| 1. | ಸತಿ ನಿರ್ಮೂಲನೆ | ಇಂಗ್ಲೀಷ್ ಶಿಕ್ಷಣ |
| 2. | ಮೇಜರ್ ಸ್ಲೀಮನ್ | 1829 |
| 3. | ರಾಜಾರಾಂ ಮೋಹನ್‌ರಾಯ್ | ಠಕ್ಕರ ನಿಗ್ರಹ |
| 4. | ಮೆಕಾಲೆ | ಸಾಮಾಜಿಕ ಸುಧಾರಣೆ |

## IV) ಒಂದು ಪದದಲ್ಲಿ ಉತ್ತರಿಸಿ.

1. ಲಾರ್ಡ್‌ವಿಲಿಯಂಬೆಂಟಿಂಕನು ಯಾವಾಗ ಭಾರತದ ಗವರ್ನರ್‌ಜನರಲ್ ಆದನು ?
2. ಎಲ್ಫಿನ್‌ಸ್ಟನ್ ಕಾಲೇಜನ್ನು ಎಲ್ಲಿ ಸ್ಥಾಪಿಸಲಾಯಿತು ?
3. ಸೇನಾಧಿಕಾರಿಗಳಿಗೆ ಕೊಡಲಾಗುತ್ತಿದ್ದ ಭತ್ಯವನ್ನು ಕಡಿಮೆಗೊಳಿಸಿದವನು ಯಾರು ?

## V) ಸಂಕ್ಷಿಪ್ತವಾಗಿ ಉತ್ತರಿಸಿ.

1. ಮೊದಲನೇ ಬರ್ಮಾ ಯುದ್ಧದ ಲಘು ಟಿಪ್ಪಣಿ ಬರೆಯಿರಿ.
2. ಲಾರ್ಡ್ ವಿಲಿಯಂ ಬೆಂಟಿಂಕ್‌ನ ಶೈಕ್ಷಣಿಕ ಸುಧಾರಣೆಗಳನ್ನು ತಿಳಿಸಿ.
3. ಲಾರ್ಡ್ ವಿಲಿಯಂ ಬೆಂಟಿಂಕ್‌ನ ಆಡಳಿತ ಸುಧಾರಣೆಗಳ ಬಗ್ಗೆ ನಿಮಗೇನು ತಿಳಿದಿದೆ?

## VI) ವಿವರವಾಗಿ ಉತ್ತರಿಸಿ.

1. ಲಾರ್ಡ್ ವಿಲಿಯಂ ಬೆಂಟಿಂಕ್‌ನ ಸಾಮಾಜಿಕ ಸುಧಾರಣೆಗಳ ಬಗ್ಗೆ ವಿವರಿಸಿ.

## VII) ಚಟುವಟಿಕೆಗಳು.

ಭಾರತದ ಸಮಾಜದಲ್ಲಿದ್ದ ಹಲವಾರು ಸಾಮಾಜಿಕ ಪಿಡುಗುಗಳ ಬಗ್ಗೆ ಮತ್ತು ಅವುಗಳನ್ನು ಹೇಗೆ ನಿರ್ಮೂಲನೆಗೊಳಿಸಲಾಯಿತು ಎಂಬುದರ ಬಗ್ಗೆ ನಾಟಕ ಮಾಡಿ ತೋರಿಸಿರಿ.

## ರಚನಾತ್ಮಕ ಮೌಲ್ಯಮಾಪನ

**1. ಸಂವಾದ (ಗುಂಪು ಚರ್ಚೆ) :**

"ಸರ್ಕಾರದ ಒಳಿತು ಆಳಲ್ಪಡುವ ಪ್ರಜೆಗಳ ಒಳಿತನ್ನು ಮೂಲಾಧಾರವಾಗಿಸಿಕೊಂಡದ್ದು" ಎಂಬ ಹೇಳಿಕೆಯನ್ನು ನಿರೂಪಿಸಿದವರು ವಿಲಿಯಂ ಬೆಂಟಿಂಕ್ – ಸಂವಾದ ಮಾಡಿರಿ.

**2. ಪ್ರಬಂಧ ಬರೆಯುವಿಕೆ :**

ಲಾರ್ಡ್‌ವಿಲಿಯಂ ಬೆಂಟಿಂಕ್‌ನ ಸುಧಾರಣೆಗಳನ್ನು ಕುರಿತು ಪ್ರಬಂಧವೊಂದನ್ನು ಬರೆಯಿರಿ.

**3. ಚರ್ಚಾ ಸ್ಪರ್ಧೆ :**

ಭಾರತದ ಸಮಾಜದಲ್ಲಿ ಅಧಿಕವಾಗುತ್ತಿರುವ ಸಾಮಾಜಿಕ ಹಿಂಸೆಗಳ ಬಗ್ಗೆ ಚರ್ಚಾಸ್ಪರ್ಧೆಯೊಂದನ್ನು ನಡೆಸುವುದು.

**4. ಗುಂಪು ಚರ್ಚೆ :**

"ಲಾರ್ಡ್ ಮೆಕಾಲೆ" ಯ ಶಿಕ್ಷಣದ ನೀತಿಯ ಬಗ್ಗೆ ಗುಂಪುಗಳನ್ನು ರಚಿಸಿ ಅವುಗಳೊಳಗೆ ಗುಂಪು ಚರ್ಚೆ ನಡೆಸುವುದು.

# 2. ಲಾರ್ಡ್‌ಡಾಲ್‌ಹೌಸಿ (ಕ್ರಿ.ಶ. 1848 – ಕ್ರಿ.ಶ. 1855)

ಲಾರ್ಡ್‌ಡಾಲ್‌ಹೌಸಿ ಕ್ರಿ.ಶ. 1848 ರಲ್ಲಿ ಭಾರತದ ಗವರ್ನರ್‌ಜನರಲ್ ಆಗಿ ಅಧಿಕಾರ ವಹಿಸಿಕೊಂಡನು. ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗಾಗಿ ಹಲವಾರು ಕ್ರಮಗಳನ್ನು ಕೈಗೊಂಡನು. ಇದಕ್ಕಾಗಿ ಮೂರು ವಿಧಾನಗಳನ್ನು ಅನುಸರಿಸಿದನು. ಅವುಗಳೆಂದರೆ :

ಅ. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಂತೆ ವಿಲೀನಗೊಂಡ ಸಂಸ್ಥಾನಗಳು.

ಆ. ಯುದ್ಧದ ಮೂಲಕ ವಿಲೀನಗೊಂಡ ಪ್ರಾಂತ್ಯಗಳು.

ಇ. ದುರಾಡಳಿತದ ನೆಪದ ಮೇಲೆ ವಿಲೀನಗೊಂಡ ಪ್ರಾಂತ್ಯಗಳು.

### ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯ ಮೂಲಕ ವಿಲೀನಗೊಂಡ ಪ್ರಾಂತ್ಯಗಳು

ಲಾರ್ಡ್‌ಡಾಲ್‌ಹೌಸಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗಾಗಿ ಹೊಸ ನೀತಿಯನ್ನು ಅನುಸರಿಸಿದನು. ಇದನ್ನು ದತ್ತು ಮಕ್ಕಳಿಗೆ ಹಕ್ಕಿಲ್ಲ ಸಿದ್ದಾಂತ ಎಂದು ಕರೆಯಲಾಗಿದೆ. ಈ ನೀತಿಯಂತೆ ಭಾರತದ ರಾಜರು ಗಂಡು ಮಕ್ಕಳಿಲ್ಲದಿದ್ದರೆ, ಅವರ ದತ್ತು ಮಕ್ಕಳು ರಾಜರಾಗುವಂತಿರಲಿಲ್ಲ. ಅಂತಹ ಪ್ರಾಂತ್ಯಗಳನ್ನು ಬ್ರಿಟಿಷ್ ಸಾಮ್ರಾಜ್ಯದೊಡನೆ ವಿಲೀನಗೊಳಿಸಲಾಗುವುದು. ದತ್ತು ಮಕ್ಕಳು ಆಸ್ತಿಯ ಹಕ್ಕನ್ನು ಮಾತ್ರ ಹೊಂದಿರುವರು.

ಈ ನೀತಿಯು ಆಧಾರದ ಮೇಲೆ ಲಾರ್ಡ್‌ಡಾಲ್‌ಹೌಸಿ ಸತಾರ, ಜೈಪುರ, ಸಂಬಲ್‌ಪುರ, ಉದಯಪುರ, ಝಾನ್ಸಿ ಮತ್ತು ನಾಗಪುರಗಳನ್ನು ಸ್ವಾಧೀನಪಡಿಸಿಕೊಂಡನು. ಈ ನೀತಿಯು ಭಾರತೀಯರ ನಡುವೆ ತೀವ್ರ ವಿರೋಧವನ್ನುಂಟು ಮಾಡಿತು. ಕ್ರಿ.ಶ. 1857 ರಲ್ಲಿ ನಡೆದ ಮಹಾ ಕ್ರಾಂತಿಗೆ ಇದು ಪ್ರಮುಖವಾದ ಕಾರಣವಾಯಿತು.

### ಯುದ್ಧಗಳ ಮೂಲಕ ವಿಲೀನಗೊಂಡ ಪ್ರಾಂತ್ಯಗಳು
### ಎರಡನೇ ಆಂಗ್ಲೋ–ಸಿಖ್ ಯುದ್ಧ
### ಕ್ರಿ.ಶ. 1848 – 1849

ಎರಡನೇ ಆಂಗ್ಲೋ–ಸಿಖ್ ಯುದ್ಧವು ಲಾರ್ಡ್‌ಡಾಲ್‌ಹೌಸಿಯ ಕಾಲದಲ್ಲಿ ನಡೆಯಿತು. ಮೊದಲನೇ ಸಿಖ್ ಯುದ್ಧದಲ್ಲಿ ಸಿಖ್ಖರು ಸೋಲು ಅನುಭವಿಸಿದರು. ಅವರ ಅಧಿಪತ್ಯವು ಸಂಪೂರ್ಣವಾಗಿ ನಾಶಗೊಳ್ಳಲಿಲ್ಲ.

ಸಿಖ್ಖರು ಮುಲ್‌ರಾಜ್‌ರವರ ಮುಖಂಡತ್ವದಲ್ಲಿ ಬ್ರಿಟಿಷರ ವಿರುದ್ಧವಾಗಿ ಕ್ರಾಂತಿಯಲ್ಲಿ ತೊಡಗಿದರು. ಹೀಗಾಗಿ ಲಾರ್ಡ್ ಡಾಲ್‌ಹೌಸಿ ಸಿಖ್ಖರುಗಳಿಗೆ ವಿರುದ್ಧವಾಗಿ ಕ್ರಿ.ಶ. 1848 ರಲ್ಲಿ ಯುದ್ಧವನ್ನು ಘೋಷಿಸಿದನು. ಸಿಖ್ಖರಿಗೆ ಸೋಲುಂಟಾಯಿತು. ನಂತರ ಲಾರ್ಡ್ ಡಾಲ್‌ಹೌಸಿ ಪಂಜಾಬನ್ನು ಕ್ರಿ.ಶ. 1849 ರಲ್ಲಿ ಬ್ರಿಟಿಷ್ ಸರ್ಕಾರದೊಡನೆ ವಿಲೀನಗೊಳಿಸಿದನು.

### ಎರಡನೇ ಬರ್ಮಾ ಯುದ್ಧ ಕ್ರಿ.ಶ. 1852

ಮೊದಲನೇ ಬರ್ಮಾ ಯುದ್ಧದ ನಂತರ ಬ್ರಿಟಿಷ್ ವ್ಯಾಪಾರಿಗಳು ಬರ್ಮಾದೊಡನೆ ವ್ಯಾಪಾರ ಮಾಡಲು ಬರ್ಮಾದಲ್ಲಿ ನೆಲೆಸಲು ಅನುಮತಿ ಪಡೆದರು. ಆದರೆ, ಬ್ರಿಟಿಷ್ ವ್ಯಾಪಾರಿಗಳು ಅಗೌರವಕ್ಕೊಳಗಾದರು. ಇವರು ಲಾರ್ಡ್ ಡಾಲ್‌ಹೌಸಿಯ ಸಹಾಯ ಬಯಸಿದರು. ಹೀಗಾಗಿ ಲಾರ್ಡ್ ಡಾಲ್‌ಹೌಸಿ ಬರ್ಮಾದೊಡನೆ ಯುದ್ಧ ಮಾಡಲು ಸೇನೆಯನ್ನು ಕಳುಹಿಸಿದನು. ಇದು ಕ್ರಿ.ಶ. 1852 ರಲ್ಲಿ ಎರಡನೇ ಬರ್ಮಾ ಯುದ್ಧವಾಗಿ ಪರಿಣಮಿಸಿತು. ಬರ್ಮೀಯರು ಬ್ರಿಟಿಷರಿಂದ ಸೋಲಲ್ಪಟ್ಟರು. ಈ ಯುದ್ಧದ ಮೂಲಕ ಪೂರ್ವ ಬರ್ಮಾವನ್ನು ಬ್ರಿಟಿಷ್ ಸಾಮ್ರಾಜ್ಯದೊಡನೆ ವಿಲೀನಗೊಳಿಸಲಾಯಿತು.

### ದುರಾಡಳಿತದ ನೆಪದ ಮೇಲೆ ಆಕ್ರಮಿಸಿದ ರಾಜ್ಯಗಳ ವಿಲೀನ

ಲಾರ್ಡ್ ಡಾಲ್‌ಹೌಸಿ ಕ್ರಿ.ಶ.1856 ರಲ್ಲಿ ಅಸಮರ್ಥ ಆಡಳಿತ ಕಾರಣದಿಂದ ಅಯೋಧ್ಯೆಯ

ಅರಸನಾಗಿದ್ದ ವಾಜಿದ್ ಅಲಿಷಾನನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು. ಅಯೋಧ್ಯೆಯನ್ನು ಬ್ರಿಟಿಷ್ ಸಾಮ್ರಾಜ್ಯದೊಡನೆ ವಿಲೀನಗೊಳಿಸಲಾಯಿತು. ತಂಜಾವೂರು ಸಹ ಬ್ರಿಟಿಷ್ ಸಾಮ್ರಾಜ್ಯದೊಡನೆ ವಿಲೀನಗೊಂಡಿತು.

### ಲಾರ್ಡ್ ಡಾಲ್‌ಹೌಸಿಯ ಸುಧಾರಣೆಗಳು

ಲಾರ್ಡ್ ಡಾಲ್‌ಹೌಸಿ ದಿಗ್ವಿಜಯ ಹಾಗೂ ಸಾಮ್ರಾಜ್ಯ ವಿಸ್ತರಣೆಯಲ್ಲೂ ಹಾಗೂ ಆಡಳಿತಜ್ಞನೂ ಮತ್ತು ಸುಧಾರಕನೂ ಸಹ ಆಗಿದ್ದನು. ಹಲವಾರು ಸುಧಾರಣೆಗಳನ್ನು ಜಾರಿಗೆ ತಂದನು.

### ಆಡಳಿತ ಸುಧಾರಣೆಗಳು

ಭಾರತದ ಗವರ್ನರ್ ಜನರಲ್ ಬಂಗಾಳದ ಗವರ್ನರ್ ಜನರಲ್ ಆಗಿಯೂ ಕಾರ್ಯನಿರ್ವಹಿಸುತ್ತಾ ಬಂದನು. ಇದರಿಂದಾಗಿ ಸಮರ್ಥ ಆಡಳಿತವನ್ನು ನಡೆಸಲಾಗಲಿಲ್ಲ. ಆ ಸಂದರ್ಭದಲ್ಲಿ ಬಂಗಾಳದ ಆಡಳಿತವನ್ನು ನೋಡಿಕೊಳ್ಳಲು ಲೆಫ್ಟಿನೆಂಟ್ ಗವರ್ನರ್‌ನೊಬ್ಬರನ್ನು ನೇಮಿಸಿದನು.

ಪ್ರತಿಯೊಂದು ಪ್ರಾಂತ್ಯವು ಹಲವು ಜಿಲ್ಲೆಗಳಾಗಿ ವಿಭಜಿಸಲ್ಪಟ್ಟು ಡೆಪ್ಯೂಟಿ ಕಮೀಷನರುಗಳನ್ನು ನೇಮಿಸಿ ಅವರಿಗೆ ಆಡಳಿತ ನಿರ್ವಹಣೆಯನ್ನು ಒಪ್ಪಿಸಲಾಯಿತು. ಸಿಮ್ಲಾ ಬೇಸಿಗೆ ಕಾಲದ ರಾಜಧಾನಿಯಾಗಿಯೂ, ಕಲ್ಕತ್ತ ಚಳಿಗಾಲದ ರಾಜಧಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದವು.

ಲಾರ್ಡ್ ಡಾಲ್‌ಹೌಸಿ ಮದ್ರಾಸ್, ಬೊಂಬಾಯಿ, ಕಲ್ಕತ್ತ ಪ್ರಾಂತ್ಯಗಳಲ್ಲೂ ಒಂದೇ ರೀತಿಯಾದ ಆಡಳಿತವನ್ನು ಜಾರಿಗೆ ತಂದನು.

### ರೈಲು ಮಾರ್ಗದ ಪರಿಚಯ

ಭಾರತದಲ್ಲಿ ಮೊಟ್ಟಮೊದಲಿಗೆ ರೈಲು ಮಾರ್ಗವನ್ನು ಪರಿಚಯಿಸಿದ ಕೀರ್ತಿ ಲಾರ್ಡ್ ಡಾಲ್‌ಹೌಸಿಗೆ ಸಲ್ಲುತ್ತದೆ. ಬೊಂಬಾಯಿ ಮತ್ತು ಥಾನಾದ ನಡುವೆ 1853 ರಲ್ಲಿ ಭಾರತದಲ್ಲಿ ಪ್ರಥಮ ರೈಲು ಮಾರ್ಗ ಹಾಕಿಸಿದನು. ಕ್ರಿ.ಶ. 1854 ರಲ್ಲಿ ಹೌರಾ ಮತ್ತು ರಾಣಿಗಂಜ್ ನಡುವೆ ರೈಲು ಮಾರ್ಗ ಹಾಕಲಾಯಿತು. ರೈಲು ಮಾರ್ಗ ಪ್ರಾರಂಭವಾದುದರಿಂದ ವ್ಯಾಪಾರ ಅಭಿವೃದ್ಧಿಗೊಂಡಿತು. ಬ್ರಿಟಿಷರ ಸೇನೆಗಳು, ವಸ್ತುಗಳು ಮತ್ತು ಕಚ್ಚಾವಸ್ತುಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಲು ಅನುಕೂಲವಾಯಿತು.

ಲಾರ್ಡ್‌ಡಾಲ್‌ಹೌಸಿ "ರೈಲು ಮಾರ್ಗದ ತಂದೆ" ಎಂದು ಕರೆಯಲ್ಪಡುವರು.

### ಅಂಚೆ ಮತ್ತು ತಂತಿ

ದೇಶದಾದ್ಯಂತ ಅಂಚೆ ಮತ್ತು ತಂತಿ ಕಛೇರಿಗಳನ್ನು ಸ್ಥಾಪಿಸಿದನು. ಎಲ್ಲಾ ರಾಜ್ಯಗಳಲ್ಲಿರುವ ಅಂಚೆ ಕಛೇರಿ ಕಾರ್ಯಗಳ ಮೇಲ್ವಿಚಾರಣೆಗಾಗಿ ಡೈರೆಕ್ಟರ್ ಜನರಲ್‌ನ್ನು ನೇಮಿಸಲಾಯಿತು. ಭಾರತದಲ್ಲಿ ಮೊಟ್ಟ ಮೊದಲಿಗೆ ಏಕ ರೂಪವಾದ ಅಂಚೆ ಚೀಟಿಯನ್ನು ಪರಿಚಯಿಸಲಾಯಿತು. ಲಾರ್ಡ್ ಡಾಲ್‌ಹೌಸಿಯು ಅರ್ಧಾಣೆಯ (3 ಪೈಸೆ) ಅಂಚೆ ಪದ್ಧತಿಯನ್ನು ಪರಿಚಯಿಸಿದನು. ದೇಶದಾದ್ಯಂತ ತಂತಿ ಮೂಲಕ ಸಂಪರ್ಕ ಕಲ್ಪಿಸಲಾಯಿತು. ಹೀಗೆ ಸಾರಿಗೆ ಮತ್ತು ಸುದ್ದಿ ಸಂಪರ್ಕ ವ್ಯವಸ್ಥೆಯು ಲಾರ್ಡ್ ಡಾಲ್‌ಹೌಸಿ ಆಡಳಿತದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಕೊಂಡವು.

### ವಾಣಿಜ್ಯ ಸುಧಾರಣೆಗಳು

ಲಾರ್ಡ್ ಡಾಲ್‌ಹೌಸಿಯು ಮುಕ್ತ ವ್ಯಾಪಾರ ನೀತಿಯನ್ನು ಜಾರಿಗೊಳಿಸಿದನು. ಮದ್ರಾಸ್, ಬೊಂಬಾಯಿ, ಕಲ್ಕತ್ತ ಬಂದರುಗಳನ್ನು ಅಭಿವೃದ್ಧಿ ಪಡಿಸಲಾಯಿತು. ದೇಶದಾದ್ಯಂತ ಹಲವು ಆಧುನಿಕ ಸೌಲಭ್ಯಗಳನ್ನೊಳಗೊಂಡ ಬಂದರುಗಳನ್ನು ಅಭಿವೃದ್ಧಿ ಪಡಿಸಿದನು. ಇಂಗ್ಲೆಂಡ್ ಮತ್ತು ಭಾರತದ ನಡುವಿನ ವಾಣಿಜ್ಯ ಸಂಬಂಧಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಯಿತು.

### ಸಾಮಾಜಿಕ ಸುಧಾರಣೆಗಳು

ಲಾರ್ಡ್ ಡಾಲ್‌ಹೌಸಿಯು ಸತಿ ಸಹಗಮನ ಪದ್ಧತಿ ನಿರ್ಮೂಲನೆಗೆ ಕ್ರಮಕೈಗೊಂಡನು. ಠಕ್ಕರನ್ನು ಅಡಗಿಸಿದನು. ಕ್ರಿ.ಶ. 1856 ರಲ್ಲಿ ಹಿಂದೂ ವಿಧವಾ ಪುನರ್ ವಿವಾಹ ಕಾಯಿದೆಯನ್ನು ಜಾರಿಗೊಳಿಸಿದನು. ಇವನು ವಿಧವೆಯರ ಪುನರ್ ವಿವಾಹಕ್ಕೆ ಪ್ರೋತ್ಸಾಹ ನೀಡಿದನು. ಯಾರಾದರು ಮತಾಂತರ ಗೊಂಡರೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಇದೆ ಎಂಬುದನ್ನು ಪ್ರಕಟಿಸಿದನು.

## ಲೋಕೋಪಯೋಗಿ ಇಲಾಖೆ

ಲಾರ್ಡ್‌ಡಾಲ್‌ಹೌಸಿಯು ಲೋಕೋಪಯೋಗಿ ಇಲಾಖೆಯನ್ನು ಪ್ರತ್ಯೇಕ ಇಲಾಖೆಯಾಗಿ ಬೇರ್ಪಡಿಸಿದನು. ಹಲವಾರು ಕಾಲುವೆಗಳು, ರಸ್ತೆಗಳು, ಸೇತುವೆಗಳು ಮತ್ತು ಹಲವಾರು ಲೋಕೋಪಯೋಗಿ ಕೆಲಸಗಳನ್ನು ಜನರ ಕಲ್ಯಾಣಕ್ಕಾಗಿ ಅಭಿವೃದ್ಧಿ ಪಡಿಸಲಾಯಿತು. ಪೆಷಾವರ್ ಮತ್ತು ಕಲ್ಕತ್ತಾ ನಡುವೆ ಗ್ರಾಂಡ್ ಟ್ರಂಕ್ ರಸ್ತೆಯನ್ನು ಪುನರ್ ರಚಿಸಲಾಯಿತು. ಗಂಗಾ ಕಾಲುವೆಯು ಇವರ ಕಾಲದಲ್ಲಿ ನಿರ್ಮಿಸಲ್ಪಟ್ಟಿತು.

## ಶೈಕ್ಷಣಿಕ ಸುಧಾರಣೆಗಳು

ಲಾರ್ಡ್‌ಡಾಲ್‌ಹೌಸಿ ಕಾಲದಲ್ಲಿ ಕ್ರಿ.ಶ. 1854 ರಲ್ಲಿ ಸರ್ ಚಾರ್ಲ್ಸ್‌ವುಡ್ಸ್‌ನ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಯಿತು. ಇದು ಭಾರತದ ಶಿಕ್ಷಣ ಪದ್ಧತಿಯಲ್ಲಿ ಹಲವು ಸುಧಾರಣೆಗಳನ್ನು ತಂದಿತು. ಪ್ರತಿಯೊಂದು ಪ್ರಾಂತ್ಯಗಳಲ್ಲೂ ಶಿಕ್ಷಣ ಇಲಾಖೆಯನ್ನು ಪ್ರತ್ಯೇಕಿಸಲಾಯಿತು. ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯ ಶಿಕ್ಷಣದವರೆಗೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಶಿಕ್ಷಕರ ತರಬೇತಿ ಶಾಲೆಗಳನ್ನು ದೇಶದಾದ್ಯಂತ ಪ್ರಾರಂಭಿಸಿ ಶಿಕ್ಷಕರಿಗೆ ತರಬೇತಿ ನೀಡಲಾಯಿತು. ಲಂಡನ್ ವಿಶ್ವ ವಿದ್ಯಾನಿಲಯದ ಮಾದರಿಯಲ್ಲಿ ಮದರಾಸು, ಬೊಂಬಾಯಿ, ಕಲ್ಕತ್ತಗಳಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಪಿಸಲಾಯಿತು. ರೂರ್‌ಕಿ ಎಂಬಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲ್ಪಟ್ಟಿತು. ಅಂಗೀಕಾರ ಪಡೆದ ಶಾಲೆ ಮತ್ತು ಕಾಲೇಜುಗಳಿಗೆ ಅನುದಾನ ಕೊಡುವ ಪದ್ಧತಿಯನ್ನು ಜಾರಿಗೊಳಿಸಲಾಯಿತು.

## ಸೈನಿಕ ಸುಧಾರಣೆಗಳು

ಭಾರತದ ಸೇನೆಗೆ ಘೂರ್ಖರನ್ನು ಪ್ರೋತ್ಸಾಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಂಡನು. ಸೇನೆಯ ಮುಖ್ಯ ಕೇಂದ್ರವನ್ನು ಕಲ್ಕತ್ತಾದಿಂದ ಸಿಮ್ಲಾಕ್ಕೆ ಸ್ಥಳಾಂತರಿಸಿದನು. ಫಿರಂಗಿ ದಳದ ಮುಖ್ಯ ಕೇಂದ್ರ ಸ್ಥಾನವನ್ನು ಕಲ್ಕತ್ತಾದಿಂದ ಮೀರತ್‌ಗೆ ಸ್ಥಳಾಂತರಿಸಿದನು.

## ವ್ಯಕ್ತಿತ್ವ

ಭಾರತದ ಗವರ್ನರ್‌ಜನರಲ್‌ಗಳಲ್ಲಿ ಲಾರ್ಡ್‌ಡಾಲ್‌ಹೌಸಿಯು ಅತೀ ಕಿರಿಯ ವಯಸ್ಸಿನವನಾಗಿದ್ದನು. ಇವನು ಪರಿಚಯಿಸಿದ ರೈಲುಮಾರ್ಗ, ಅಂಚೆ ಮತ್ತು ತಂತಿ ಸುಧಾರಣೆಗಳು ಭಾರತೀಯರ ಮನಸ್ಸಿನಲ್ಲಿ ಸದಾಕಾಲ ಅಚ್ಚಳಿಯದೇ ಉಳಿದುಕೊಂಡಿದೆ. ಹೀಗಾಗಿ ಲಾರ್ಡ್‌ಡಾಲ್‌ಹೌಸಿಯನ್ನು ಆಧುನಿಕ ಭಾರತದ ನಿರ್ಮಾತೃ ಎಂದು ಕರೆಯಲಾಗಿದೆ.

## ಅಭ್ಯಾಸ

**I) ಸರಿಯಾದ ಉತ್ತರವನ್ನು ಆರಿಸಿರಿ.**

1. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ____________ ಯಿಂದ ಪರಿಚಯಿಸಲ್ಪಟ್ಟಿತು.

   ಅ) ಲಾರ್ಡ್ ಡಾಲ್‌ಹೌಸಿ   ಆ) ಲಾರ್ಡ್ ಅಮ್‌ಹರ್ಸ್ಟ್   ಇ) ಲಾರ್ಡ್ ಹೇಸ್ಟಿಂಗ್ಸ್

2. ____________ ದುರಾಡಳಿತದ ನೆಪದ ಮೇಲೆ ಲಾರ್ಡ್ ಡಾಲ್‌ಹೌಸಿ ಸಾಮ್ರಾಜ್ಯದೊಡನೆ ವಿಲೀನಗೊಂಡಿತು.

   ಅ) ಸತಾರ   ಆ) ಝಾನ್ಸಿ   ಇ) ಅಯೋಧ್ಯೆ

3. ಹಿಂದೂ ವಿಧವಾ ಪುನರ್ ವಿವಾಹ ಕಾಯಿದೆ ____________ ರಲ್ಲಿ ಜಾರಿಗೊಳಿಸಲ್ಪಟ್ಟಿತು.

   ಅ) 1853   ಆ) 1855   ಇ) 1856

4. ಪ್ರಥಮ ರೈಲು ಮಾರ್ಗವನ್ನು ಬೊಂಬಾಯಿಯಿಂದ ____________ ವರೆಗೆ ಹಾಕಲಾಯಿತು.

   ಅ) ಮದರಾಸು   ಆ) ಥಾಣಾ   ಇ) ಪೂನ

**II) ಬಿಟ್ಟ ಸ್ಥಳಗಳನ್ನು ತುಂಬಿರಿ.**

1. ಲಾರ್ಡ್‌ಡಾಲ್‌ಹೌಸಿಯು ಭಾರತದ ಗವರ್ನರ್‌ಜನರಲ್ ಆಗಿ ಅಧಿಕಾರ ವಹಿಸಿಕೊಂಡ ವರ್ಷ ___________ .
2. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಂತೆ ಬ್ರಿಟಿಷ್ ಸಾಮ್ರಾಜ್ಯದೊಡನೆ ವಿಲೀನಗೊಂಡ ಮೊದಲನೇ ಸಂಸ್ಥಾನ ___________ .
3. ಗಂಗಾ ಕಾಲುವೆಯು ___________ ರವರ ಆಳ್ವಿಕೆ ಕಾಲದಲ್ಲಿ ನಿರ್ಮಿಸಲ್ಪಟ್ಟಿತು.

**III) ಹೊಂದಿಸಿ ಬರೆಯಿರಿ.**

| | |
|---|---|
| 1. ಪ್ರಥಮ ರೈಲು ಮಾರ್ಗ | ಎರಡನೇ ಬಾಜಿರಾವ್ ನ ದತ್ತು ಮಗ |
| 2. ವುಡ್ಸ್ ಶಿಕ್ಷಣ ಸಮಿತಿ | ಅಯೋಧ್ಯೆ ನವಾಬ್ |
| 3. ನಾನಾ ಸಾಹೇಬ | 1853 |
| 4. ವಾಜಿದ್ ಅಲಿ ಷಾ | 1854 |

**IV) ಒಂದು ಪದದಲ್ಲಿ ಉತ್ತರಿಸಿ.**

1. ಎರಡನೇ ಆಂಗ್ಲೋ–ಸಿಖ್ ಯುದ್ಧ ಯಾವಾಗ ನಡೆಯಿತು ?
2. ಲೋಕೋಪಯೋಗಿ ಇಲಾಖೆಯನ್ನು ಸ್ಥಾಪಿಸಿದವರು ಯಾರು ?
3. ಲಾರ್ಡ್ ಡಾಲ್‌ಹೌಸಿ ಕಾಲದಲ್ಲಿ ಸ್ಥಾಪಿಸಿದ ವಿಶ್ವವಿದ್ಯಾಲಯಗಳನ್ನು ಹೆಸರಿಸಿ.

**V) ಸಂಕ್ಷಿಪ್ತವಾಗಿ ಉತ್ತರಿಸಿ.**

1. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಎಂದರೇನು ?
2. ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗಾಗಿ ಲಾರ್ಡ್‌ಡಾಲ್‌ಹೌಸಿ ಅನುಸರಿಸಿದ ನೀತಿಗಳಾವುವು?
3. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ಮೂಲಕ ಲಾರ್ಡ್‌ಡಾಲ್‌ಹೌಸಿ ವಿಲೀನಗೊಳಿಸಿದ ಪ್ರಾಂತ್ಯಗಳನ್ನು ಹೆಸರಿಸಿ.
4. ಭಾರತದಲ್ಲಿ ರೈಲು ಮಾರ್ಗದ ತಂದೆ ಲಾರ್ಡ್ ಡಾಲ್‌ಹೌಸಿ ಎಂದು ಕರೆಯುವರು ಸಮರ್ಥಿಸಿ.

**VI) ವಿವರವಾಗಿ ಉತ್ತರಿಸಿ.**

1. ಲಾರ್ಡ್ ಡಾಲ್‌ಹೌಸಿಯು ಪರಿಚಯಿಸಿದ ಸುಧಾರಣೆಗಳನ್ನು ವಿವರಿಸಿ.

## ರಚನಾತ್ಮಕ ಮೌಲ್ಯಮಾಪನ

**1. ಸಂವಾದ :**
ಭಾರತವನ್ನು ಆಧುನಿಕಗೊಳಿಸಲು ಲಾರ್ಡ್ ಡಾಲ್‌ಹೌಸಿಯು ಕೈಗೊಂಡ ಕ್ರಮಗಳ ಬಗ್ಗೆ ಸಂವಾದ ನಡೆಸುವುದು.

**2. ಚರ್ಚಾಸ್ಪರ್ಧೆ :**
ನೀನು ನವಾಬನ ದತ್ತು ಮಗನಾಗಿದ್ದ ಪಕ್ಷದಲ್ಲಿ, ಬ್ರಿಟಿಷ್ ಸರ್ಕಾರ ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ನಿನ್ನನ್ನು ಯಾವ ವಿಧದಲ್ಲಿ ಬಾಧಿಸುತ್ತದೆ ಎಂಬುದನ್ನು ಕುರಿತು ಚರ್ಚಾಸ್ಪರ್ಧೆಯೊಂದನ್ನು ನಡೆಸುವುದು.

**3. ಪಟ್ಟಿ ತಯಾರಿಸುವಿಕೆ :**
ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯು ಜಾರಿಗೆ ತಂದ ಶಿಕ್ಷಣ ನೀತಿಯನ್ನು ತಯಾರಿಸುವುದು.

**4. ಮಾಹಿತಿಪಟ್ಟಿ ತಯಾರಿಸುವಿಕೆ :**
ಈಗ ಭಾರತದಲ್ಲಿರುವ ರೈಲ್ವೆ ವಲಯಗಳ ಬಗ್ಗೆ ಮಾಹಿತಿ ಪಟ್ಟಿಯೊಂದನ್ನು ತಯಾರಿಸು.

# 3. ಮಹಾಕ್ರಾಂತಿ – ಕ್ರಿ.ಶ.1857

ಕ್ರಿ.ಶ. 1857 ರಲ್ಲಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಂದು ದೊಡ್ಡ ಸವಾಲು ಏರ್ಪಟ್ಟಿತು. ಕ್ರಿ.ಶ. 1857 ರಲ್ಲಿ ಏರ್ಪಟ್ಟ ಕ್ರಾಂತಿಯನ್ನು ಸೈನಿಕರು ಪ್ರಾರಂಭಿಸಿದರು. ನಂತರ ಸಮಾಜದಲ್ಲಿದ್ದ ಎಲ್ಲಾ ವರ್ಗದವರು ಈ ಕ್ರಾಂತಿಯಲ್ಲಿ ಭಾಗವಹಿಸಿದರು. ಈ ಕ್ರಾಂತಿಯು ತಕ್ಷಣ ಪ್ರಾರಂಭವಾದುದಲ್ಲ. ಬ್ರಿಟಿಷರ ಆಳ್ವಿಕೆಗೆ ವಿರುದ್ಧವಾಗಿ ಭಾರತೀಯರು ಅನುಭವಿಸಿದ ಸಂಕಟಗಳ ಪ್ರತಿಫಲವಾಗಿದೆ. ಲಾರ್ಡ್‌ಕ್ಯಾನಿಂಗ್ ಗವರ್ನರ್‌ಜನರಲ್ ಆಗಿದ್ದಾಗ ಈ ಕ್ರಾಂತಿಯು ಆರಂಭವಾಯಿತು. ಇತಿಹಾಸಕಾರರ ನಡುವೆ ಈ ಕ್ರಾಂತಿಯ ಬಗ್ಗೆ ಭಿನ್ನಾಭಿಪ್ರಾಯವಿದೆ. ಆಂಗ್ಲೇಯ ಇತಿಹಾಸಕಾರರು ಈ ಕ್ರಾಂತಿಯನ್ನು ಸಿಪಾಯಿ ದಂಗೆ ಎಂದು ಅಭಿಪ್ರಾಯಪಟ್ಟರು. ಏಕೆಂದರೆ ಈ ಕ್ರಾಂತಿಯನ್ನು ಸಿಪಾಯಿಗಳು ತಮ್ಮ ಸ್ವಾರ್ಥವನ್ನು ಮೂಲಭೂತವಾಗಿಟ್ಟುಕೊಂಡು ಆರಂಭಿಸಿದರು. ಭಾರತೀಯ ಇತಿಹಾಸಕಾರರು ಈ ಕ್ರಾಂತಿಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆದರು.

## ಕ್ರಿ.ಶ. 1857 ರ ಕ್ರಾಂತಿಗೆ ಕಾರಣಗಳು

### ರಾಜಕೀಯ ಕಾರಣಗಳು

ಬ್ರಿಟಿಷರ ಆಕ್ರಮಣ ನೀತಿ ಮತ್ತು ಸಾಮ್ರಾಜ್ಯ ವಿಸ್ತರಣಾನೀತಿಯು ಭಾರತೀಯರಲ್ಲಿ ಸಂದೇಹವನ್ನು ಉಂಟು ಮಾಡಿತು. ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿ, ಲಾರ್ಡ್‌ಡಾಲ್‌ಹೌಸಿಯ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯಿಂದ ಹಲವಾರು ಭಾರತೀಯ ಅರಸರು ಬ್ರಿಟಿಷರ ವಿರೋಧಿಗಳಾಗಿ ಮಾರ್ಪಟ್ಟರು. ದುರಾಡಳಿತದ ನೆಪದ ಮೇಲೆ ಬ್ರಿಟಿಷರು ಬೀರಾರ್ ಮತ್ತು ಔದ್ ರಾಜ್ಯಗಳನ್ನು ಆಕ್ರಮಿಸಿಕೊಂಡರು.

### ಆರ್ಥಿಕ ಕಾರಣಗಳು

ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿ ಬಹುಬೇಗ ಹದಗೆಟ್ಟಿತು. ವ್ಯಾಪಾರ ಮತ್ತು ವಾಣಿಜ್ಯ ಪೂರ್ಣವಾಗಿ ಬ್ರಿಟಿಷರ ಕೈವಶವಾಯಿತು. ವಸ್ತುಗಳನ್ನು ಉತ್ಪಾದಿಸಲು ಯಂತ್ರಗಳನ್ನು ಪರಿಚಯಿಸಿದುದರಿಂದ ದೇಶೀಯ ಗುಡಿ ಕೈಗಾರಿಕೆ ನಶಿಸಿ ಹೋಯಿತು. ಇದರಿಂದ ನೂರಾರು ಮಂದಿ ನಿರುದ್ಯೋಗಿಗಳಾದರು. ಎಲ್ಲಾ ಉನ್ನತ ಪದವಿಗಳನ್ನು ಬ್ರಿಟಿಷರಿಗೆ ಕೊಡಲಾಯಿತು. ಈ ನೀತಿಯು ಬ್ರಿಟಿಷರ ಮೇಲೆ ವಿರೋಧಿ ಭಾವನೆಯನ್ನು ಉಂಟುಮಾಡಿತು.

### ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು

ರೈಲ್ವೆ ಪರಿಚಯ, ಅಂಚೆ ಮತ್ತು ತಂತಿ, ಪಾಶ್ಚಿಮಾತ್ಯ ಶಿಕ್ಷಣ ಇವುಗಳು ಬ್ರಿಟಿಷರು ತಮ್ಮನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವರೆಂಬ ಸಂಶಯ ಭಾರತೀಯರಲ್ಲಿ ಮೂಡಿತು. ಕ್ರೈಸ್ತ ಧರ್ಮ ಪ್ರಚಾರ ಮಾಡುವ ಸಂಘಗಳು ಹಿಂದೂ ಮತ್ತು ಮುಸ್ಲೀಮರನ್ನು ಶೀಘ್ರವಾಗಿ ಮತಾಂತರಗೊಳಿಸಲು ಪ್ರಾರಂಭಿಸಿದವು. ಬ್ರಿಟಿಷರು ಸತಿ ಸಹಗಮನ ಪದ್ಧತಿ, ಬಾಲ್ಯವಿವಾಹ ಪದ್ಧತಿಯ ನಿಷೇಧ, ವಿಧವಾ ಮರುವಿವಾಹಕ್ಕೆ ಪ್ರೋತ್ಸಾಹ ಮೊದಲಾದುವುಗಳನ್ನು ಹಿಂದೂಗಳು ತಮ್ಮ ಧಾರ್ಮಿಕ ಚಟುವಟಿಕೆಗಳಲ್ಲಿ ಬ್ರಿಟಿಷರು ತಲೆ ಹಾಕುವರೆಂದು ಭಾವಿಸಿದರು.

ಹಿಂದೂಗಳು ಕ್ರೈಸ್ತ ಮತಕ್ಕೆ ಮತಾಂತರಗೊಂಡರೂ ಆಸ್ತಿಯ ಹಕ್ಕು ಇದೆ ಎಂಬುದನ್ನು ಕಾನೂನು ತಿದ್ದುಪಡಿ ಮಾಡುವುದರ ಮೂಲಕ ಹಿಂದೂಗಳನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸುವ ಉದ್ದೇಶದಿಂದ ಜಾರಿಮಾಡಿದುದು ಎಂದು ಭಾವಿಸಿದರು.

### ಸೇನಾ ಕಾರಣಗಳು

ಭಾರತೀಯ ಸೈನಿಕರು ಹಲವಾರು ತೊಂದರೆಗಳಿಗೆ ಒಳಗಾಗಿದ್ದರು. ಅವರು ಉತ್ತಮ ವೇತನ ಮತ್ತು ಸೇನೆಯಲ್ಲಿ ಉತ್ತಮ ಪದವಿ ಬೇಕೆಂದು ಬ್ರಿಟಿಷ್ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು. ಲಾರ್ಡ್‌ಕ್ಯಾನಿಂಗ್‌ನ ಆಳ್ವಿಕೆಯಲ್ಲಿ ಕ್ರಿ.ಶ. 1856 ರಲ್ಲಿ "ಸಾಮಾನ್ಯ ಸೇವಾ ಕಾಯ್ದೆಯನ್ನು" ಜಾರಿಗೊಳಿಸಿ ಭಾರತೀಯ ಸೈನಿಕರು ಬ್ರಿಟಿಷರಿಗಾಗಿ ಸಮುದ್ರವನ್ನು ದಾಟಿ ಯುದ್ಧವನ್ನು ಮಾಡಬೇಕೆಂದು ತಿಳಿಸಲಾಯಿತು. ಇದಕ್ಕೆ ಸೈನಿಕರು ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಸೈನಿಕರು ಶಿಸ್ತಿನಿಂದಿರಲು ಅವರುಗಳು ಹಣೆಯಲ್ಲಿ ತಿಲಕವಿಡಲು, ದಾಡಿ, ಮೀಸೆಗಳನ್ನು ಬಿಡಲು ತಡೆ

ಹಾಕಿದರು. ಚರ್ಮದಿಂದ ಮಾಡಿದ ಟೋಪ್ಪಿಯನ್ನು ಹಾಕಿಕೊಳ್ಳಬೇಕೆಂದು ಆಜ್ಞೆ ಮಾಡಲಾಯಿತು.

ಹಿಂದೂಗಳು ಮತ್ತು ಮುಸ್ಲೀಮರು ಇದು ತಮ್ಮ ಧರ್ಮಕ್ಕೆ ವಿರೋಧವಾದುದೆಂದು ಭಾವಿಸಿದರು. ಸಿಖ್ಖರು ದಾಡಿ ಮತ್ತು ಮೀಸೆಯನ್ನು ನಿರ್ಧಿಷ್ಟ ಅಳತೆಗೆ ಕತ್ತರಿಸಿಕೊಳ್ಳಲು ನಿರಾಕರಿಸಿದರು. ಇದು ಬ್ರಿಟಿಷರಿಗೆ ವಿರೋಧವಾದ ನೀತಿಯಾಗಿದ್ದಿತು.

## ತಕ್ಷಣದ ಕಾರಣಗಳು

ಕ್ರಿ.ಶ.1857 ರ ಕ್ರಾಂತಿಗೆ ತಕ್ಷಣದ ಕಾರಣ ಬ್ರಿಟಿಷರು ಪರಿಚಯಿಸಿದ ನವೀನ ಮಾದರಿಯ ಎನ್‌ಫೀಲ್ಡ್ ಬಂದೂಕುಗಳಿಗೆ ಬಳಸುವ ತೋಟಾಗಳ ಹೊರಹೊದಿಕೆಗೆ ಕೊಬ್ಬು ಲೇಪಿಸಿದ ಕಾಗದವನ್ನು ಸುತ್ತಿದುದೇ ಆಗಿತ್ತು. ಬಂದೂಕಿಗೆ ತೋಟಾಗಳನ್ನು ಹಾಕುವಾಗ ಸೈನಿಕರು ಹಲ್ಲುಗಳಿಂದ ಕಚ್ಚಿ ಬಂದೂಕುಗಳಿಗೆ ಸೇರಿಸಬೇಕಾಗಿದ್ದಿತು. ಇವುಗಳಿಗೆ ಹಸು ಮತ್ತು ಹಂದಿಗಳ ಕೊಬ್ಬನ್ನು ಲೇಪಿಸಿದೆ ಎಂಬ ವದಂತಿ ಹರಡಿತು. ಇದು ತಮ್ಮ ಧರ್ಮಕ್ಕೆ ವಿರೋಧವಾದುದೆಂದು ಭಾವಿಸಿ ಹಿಂದೂಗಳು ಮತ್ತು ಮುಸ್ಲೀಮರು ತೋಟಾಗಳ ಉಪಯೋಗವನ್ನು ನಿರಾಕರಿಸಿದರು. ಮಂಗಳ ಪಾಂಡೆ ಎಂಬ ಬ್ರಾಹ್ಮಣ ಸಿಪಾಯಿಯು ಪ್ರಥಮವಾಗಿ ಕೊಬ್ಬು ಲೇಪಿಸಿದ ತೋಟಾಗಳ ಉಪಯೋಗವನ್ನು ವಿರೋಧಿಸಿದನು. ಇವನು ಬಂಗಾಳದಲ್ಲಿರುವ ಬ್ಯಾರಕ್‌ಪುರ ಎಂಬ ಸ್ಥಳದಲ್ಲಿದ್ದ ಭೂಸೇನಾ ಪಡೆಯ 34ನೇ ವಿಭಾಗಕ್ಕೆ ಸೇರಿದವನಾಗಿದ್ದನು.

ಇವನು ತೋಟಾಗಳ ಉಪಯೋಗವನ್ನು ನಿರಾಕರಿಸಿದುದಲ್ಲದೆ ಅಲ್ಲಿದ್ದ ಅಧಿಕಾರಿಗಳನ್ನು ಕ್ರಿ.ಶ. 1857 ರ ಏಪ್ರಿಲ್ 18 ರಂದು ಸುಟ್ಟು ಕೊಲೆಗೈದನು. ತಕ್ಷಣ ಇವನನ್ನು ಬಂಧಿಸಿ ನೇಣು ಹಾಕಲಾಯಿತು.

## ಪ್ರಮುಖ ಘಟನೆಗಳು

ಕ್ರಾಂತಿಯ ಪ್ರಮುಖ ಘಟನೆಗಳು ಕ್ರಿ.ಶ. 1857 ರ ಮೇ 9 ರಂದು ಮೀರತ್ ಎಂಬ ಸ್ಥಳದಲ್ಲಿ ಪ್ರಾರಂಭವಾಯಿತು. ಮರುದಿನ ಮೇ 10 ರಂದು ಸಿಪಾಯಿಗಳು ಬಹಿರಂಗವಾಗಿ ಯುದ್ಧದಲ್ಲಿ ತೊಡಗಿದರು. ಇಲ್ಲಿದ್ದ ಅಧಿಕಾರಿಗಳನ್ನು ಸುಟ್ಟುಹಾಕಿ ಕೈದಿಗಳನ್ನು ಬಿಡುಗಡೆ ಮಾಡಿ ಬ್ರಿಟಿಷರ ವಸತಿ ಗೃಹಗಳಿಗೆ ಬೆಂಕಿಯಿಟ್ಟರು. ನಂತರ ಸಿಪಾಯಿಗಳು ದೆಹಲಿಯ ಕಡೆಗೆ ಮುನ್ನಡೆದರು.

## ದೆಹಲಿ

ಸಿಪಾಯಿಗಳು ದೆಹಲಿಯನ್ನು ತಲುಪಿದ ನಂತರ ದೆಹಲಿಯ ಸಿಪಾಯಿಗಳು ಸಹ ಇವರೊಡನೆ ಸೇರಿಕೊಂಡು ಅಸಂಖ್ಯಾತ ಬ್ರಿಟಿಷರನ್ನು ಕೊಲೆಗೈದು ದೆಹಲಿಯನ್ನು ವಶಪಡಿಸಿಕೊಂಡರು. ಮೊಗಲರ ರಾಜ ಎರಡನೇ ಬಹದ್ದೂರ್ ಷಾನನ್ನು ದೆಹಲಿಯ ಅರಸನೆಂದು ಘೋಷಿಸಿ ಸಿಂಹಾಸನವನ್ನೇರಿಸಿದರು. ಸರ್ ಜಾನ್ ನಿಕಲ್‌ಸನ್ ಮುಂದಾಳತ್ವದಲ್ಲಿ ನಾಲ್ಕು ತಿಂಗಳುಗಳ ಕಾಲ ಮುತ್ತಿಗೆ ಹಾಕಿ ಸೆಪ್ಟೆಂಬರ್ 1857 ರಲ್ಲಿ ದೆಹಲಿಯನ್ನು ವಶಪಡಿಸಿಕೊಂಡನು. ಅಸಂಖ್ಯಾತ ಭಾರತೀಯರನ್ನು ದಯೆಯಿಲ್ಲದೆ ಕೊಲೆಗೈದರು. ಮೊಗಲ್ ಅರಸ ಎರಡನೇ ಬಹದ್ದೂರ್ ಷಾನನ್ನು ಸೆರೆಹಿಡಿದು ಅಪರಾಧಿ ಎಂದು ಘೋಷಿಸಿ ಜೀವಾವಧಿ ಶಿಕ್ಷೆಯನ್ನು ವಿಧಿಸಿ ರಂಗೂನಿಗೆ ಕಳುಹಿಸಲಾಯಿತು. ಅವನು ಕ್ರಿ.ಶ. 1862 ರಲ್ಲಿ ಮರಣ ಹೊಂದಿದನು. ಇವನ ಮರಣದೊಂದಿಗೆ ಮೊಗಲ್ ಸಾಮ್ರಾಜ್ಯವು ಕೊನೆಗೊಂಡಿತು.

## ಕಾನ್ಪುರ

ನಾನಾಸಾಹೇಬ ಪೇಶ್ವೆ ಎರಡನೇ ಬಾಜೀರಾಯನ ಸಾಕು ಮಗ. ಕಾನ್ಪುರದ ಕ್ರಾಂತಿಯ ಮುಂದಾಳತ್ವವನ್ನು ವಹಿಸಿಕೊಂಡು ಕ್ರಾಂತಿಯನ್ನು ನಡೆಸಿದನು. ಇವನ ಸೇನಾನಾಯಕ ತಾಂತ್ಯಾಟೋಪೆಯ ಸಹಾಯದಿಂದ ಕಾನ್ಪುರದ ಕೋಟೆಯನ್ನು ವಶಪಡಿಸಿಕೊಂಡು ತನ್ನನ್ನು ಪೇಶ್ವೆ ಎಂದು ಘೋಷಿಸಿಕೊಂಡನು.

ಕರ್ನಲ್ ಹಾವ್‌ಲಾಕ್ ಮತ್ತು ಕರ್ನಲ್ ಒನೆಯಿಲ್ ಮೊದಲಾದವರ ಮುಂದಾಳತ್ವದಲ್ಲಿ ಬ್ರಿಟಿಷರ ಸೈನ್ಯವು ಕಾನ್ಪುರವನ್ನು ಪ್ರವೇಶಿಸಿ ಕ್ರಾಂತಿಕಾರರನ್ನು ಸೋಲಿಸಿತು. ಅಂತಿಮವಾಗಿ ಸೇನಾ ನಾಯಕನಾದ ಹಾವ್‌ಲಾಕ್ ನಾನಾಸಾಹೇಬನನ್ನು ಸೋಲಿಸಿ 1857 ರ ಜುಲೈ 17 ರಂದು ಪುನಃ ಕಾನ್ಪುರವನ್ನು ವಶಪಡಿಸಿಕೊಂಡನು. ಆದರೆ, ನಾನಾಸಾಹೇಬ್ ತಪ್ಪಿಸಿಕೊಂಡು ನೇಪಾಳಕ್ಕೆ ಹೋಗಿ ಕೆಲವು ವರ್ಷಗಳ ನಂತರ ಮರಣ ಹೊಂದಿದನು.

## ಲಕ್ನೋ

ಅಯೋಧ್ಯೆಯ ನವಾಬ್ ವಾಜಿದ್ ಅಲಿಯ ಹೆಂಡತಿ ಬೇಗಂ ಹಜರತ್ ಮಹಲ್ ಲಕ್ನೋದ ಕ್ರಾಂತಿಗೆ ಮುಂದಾಳತ್ವ ವಹಿಸಿಕೊಂಡು ಕ್ರಾಂತಿಯನ್ನು ನಡೆಸಿದಳು. ತನ್ನ ಮಗನಾದ ಫಿರ್ಜಿಷ್ ಖಾದರ್ ಎಂಬುವವನನ್ನು ಅಯೋಧ್ಯೆಯ ನವಾಬನೆಂದು ಘೋಷಿಸಿದಳು. ಕ್ರಾಂತಿಕಾರರು ಸರ್ ಹೆನ್ರಿ ಲಾರೆನ್ಸ್‌ನನ್ನು ಕೊಲೆಗೈದರು. ನಂತರ ಜನರಲ್ ಔಟ್ರಂ ಮತ್ತು ಹಾವ್‌ಲಾಕ್ ಇತರ ಸೇನೆಯ ಸಹಾಯದಿಂದ ಲಕ್ನೋ ತಲುಪಿದರು. ಕ್ರಿ.ಶ. 1858 ರಲ್ಲಿ ಲಕ್ನೋ ಪುನಃ ಬ್ರಿಟಿಷರ ವಶವಾಯಿತು.

## ಮಧ್ಯ ಭಾರತ

ಮಧ್ಯ ಭಾರತದಲ್ಲಿ ನಾನಾ ಸಾಹೇಬನ ಸೇನಾಧಿಪತಿಯಾದ ತಾಂತ್ಯಾಟೋಪೆ, ಝಾನ್ಸಿರಾಣಿ ಲಕ್ಷ್ಮಿಬಾಯಿ ಕ್ರಾಂತಿಯನ್ನು ನಡೆಸಿದರು. ಬ್ರಿಟಿಷರಿಗೆ ವಿರೋಧವಾಗಿ ಮಹಿಳೆಯರು ಯುದ್ಧ ಮಾಡುವುದನ್ನು ಪ್ರೇರೇಪಿಸಿದರು.



ಝಾನ್ಸಿರಾಣಿ ಲಕ್ಷ್ಮಿಬಾಯಿ


ತಾಂತ್ಯಾಟೋಪೆ, ಝಾನ್ಸಿರಾಣಿ ಮೊದಲಾದ ಕ್ರಾಂತಿಕಾರರು ಬ್ರಿಟಿಷರ ವಿರುದ್ಧ ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಸರ್ ಹ್ಯುಗ್‌ರೋಸ್ ಮುಂದಾಳತ್ವದಲ್ಲಿ ಬ್ರಿಟಿಷರ ಸೇನೆಯು ಝಾನ್ಸಿ ಕೋಟೆಯನ್ನು ಮುತ್ತಿಗೆ ಹಾಕಿದಾಗ ಲಕ್ಷ್ಮಿಬಾಯಿ ವೀರಾವೇಷದಿಂದ ಬ್ರಿಟಿಷರೊಡನೆ ಹೋರಾಡಿ ಯುದ್ಧ ಮಾಡಿದರೂ ಕೋಟೆಯನ್ನು ರಕ್ಷಿಸಿಕೊಳ್ಳಲಾಗದೆ ಕಲ್ಪಿ ಎಂಬ ಸ್ಥಳಕ್ಕೆ ಓಡಿಹೋದಳು. ತಾಂತ್ಯಾಟೋಪೆ ಇವರಿಗೆ ಸಹಾಯ ಮಾಡಿದರು. ಇಬ್ಬರೂ ಒಗ್ಗೂಡಿ ಗ್ವಾಲಿಯರ್ ಕೋಟೆಯನ್ನು ವಶಪಡಿಸಿಕೊಂಡರು. ಬ್ರಿಟಿಷರು ಅವರುಗಳಿಗೆ ವಿರುದ್ಧವಾಗಿ ಯುದ್ಧವನ್ನು ಕೈಗೊಂಡರು. ಝಾನ್ಸಿರಾಣಿಯು ಬ್ರಿಟಿಷರ ವಿರುದ್ಧ ವೀರಾವೇಷದಿಂದ ಹೋರಾಡುತ್ತಲೇ ಯುದ್ಧರಂಗದಲ್ಲಿಯೇ ವೀರಮರಣವನ್ನು ಹೊಂದಿದಳು. ತಾಂತ್ಯಾಟೋಪೆ ಅಲ್ಲಿಂದ ತಲೆತಪ್ಪಿಸಿಕೊಂಡನು. ಆದರೆ, ಸೆರೆಹಿಡಿದು ಅವರನ್ನು ಕೊಲೆಗೈಯ್ಯಲಾಯಿತು. ಅವನ ಮರಣದೊಂದಿಗೆ ಸಿಪಾಯಿ ದಂಗೆಯು ಕೊನೆಗೊಂಡಿತು. ಕ್ರಿ.ಶ. 1857 ರ ಕ್ರಾಂತಿಯು ಸೋಲಿನೊಡನೆ ಮುಕ್ತಾಯವಾದರೂ ಇದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ನಾಂದಿಯಾಯಿತು.

## ಕ್ರಿ.ಶ. 1857 ರ ಕ್ರಾಂತಿಯ ಸೋಲಿಗೆ ಕಾರಣಗಳು

ಕ್ರಿ.ಶ. 1857 ರ ಸಿಪಾಯಿ ದಂಗೆಯು ಹಲವಾರು ಕಾರಣಗಳಿಂದ ಸೋಲನ್ನು ಕಂಡಿತು. ಬ್ರಿಟಿಷರಿಗೆ ವಿರೋಧವಾಗಿ ಭಾರತೀಯರಲ್ಲಿ ರಾಷ್ಟ್ರೀಯ ಭಾವನೆ ಮತ್ತು ಒಗ್ಗಟ್ಟಿರಲಿಲ್ಲ. ಕ್ರಾಂತಿಯು ದೇಶದಾದ್ಯಂತ ಹರಡಲಿಲ್ಲ. ಬ್ರಿಟಿಷರನ್ನು ಸೋಲಿಸಲು ಸೈನಿಕಬಲ, ಆರ್ಥಿಕಬಲದ ಕೊರತೆಯಿಂದಾಗಿ ಕ್ರಾಂತಿಕಾರರು ಜಯವನ್ನು ಸಾಧಿಸಲಾಗಲಿಲ್ಲ.

ಅಂಚೆ-ತಂತಿ ಸೌಲಭ್ಯ ಶೀಘ್ರವಾಗಿ ಬ್ರಿಟಿಷರಿಗೆ ಮಾಹಿತಿಗಳನ್ನು ತಿಳಿದುಕೊಳ್ಳಲು ಸಹಾಯ ಮಾಡಿತು. ರೈಲ್ವೆ ಸಂಚಾರವು ಸೈನಿಕರನ್ನು ಬಹುಬೇಗ ಸಾಗಿಸಲು ಸಹಾಯಕವಾಯಿತು. ಸಿಖ್ಖರು, ರಜಪೂತರು ಮತ್ತು ಘೂರ್ಖ ಸೈನಿಕರು ಬ್ರಿಟಿಷರೊಡನೆ ವಿಶ್ವಾಸದಿಂದ ನಡೆದುಕೊಂಡರು. ಇದು ಕ್ರಾಂತಿಕಾರರನ್ನು ಬಹಳವಾಗಿ ಬಾಧಿಸಿತು. ಬ್ರಿಟಿಷರ ಸೇನೆಯಲ್ಲಿ ದಕ್ಷ ಸೇನಾಧಿಪತಿಗಳಾದ ಸರ್ ಜಾನ್‌ಲಾರೆನ್ಸ್ ಹಾವ್‌ಲುಕ್ ಮತ್ತು ನಿಕೋಲ್‌ಸನ್ ಮೊದಲಾದವರುಗಳಿದ್ದರು. ಇವರಿಗೆ ಸರಿಸಮನಾಗಿ ಭಾರತೀಯ ಸೇನಾಧಿಕಾರಿಗಳಿರಲಿಲ್ಲ. ಬ್ರಿಟಿಷರ ನೌಕಾಬಲ ಉತ್ತಮವಾಗಿದ್ದುದರಿಂದ ಇಂಗ್ಲೆಂಡಿನಿಂದ ಅಗತ್ಯವಾದ ಹಣ ಮತ್ತು ಸೈನಿಕ ಸಹಾಯವನ್ನು ಬಹು ಸುಲಭವಾಗಿ ಪಡೆದುಕೊಳ್ಳಲು

# 1857ರಲ್ಲಿ ಕ್ರಾಂತಿ ನಡೆದ ಪ್ರಮುಖ ಸ್ಥಳಗಳು



ಸಾಧ್ಯವಾಯಿತು. ಇದು ಕ್ರಾಂತಿಯ ಸೋಲಿಗೆ ದಾರಿಮಾಡಿಕೊಟ್ಟಿತು.

### ಕ್ರಿ.ಶ. 1857 ರ ಕ್ರಾಂತಿಯ ಫಲಿತಾಂಶಗಳು

ಕ್ರಿ.ಶ. 1857 ರ ಕ್ರಾಂತಿಯು ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಆಳ್ವಿಕೆಯನ್ನು ಕೊನೆಗೊಳಿಸಿತು. ಭಾರತದ ಆಳ್ವಿಕೆಯ ಹೊಣೆಯನ್ನು ಬ್ರಿಟಿಷ್ ಸರ್ಕಾರವೇ ವಹಿಸಿಕೊಂಡಿತು. ವಿಕ್ಟೋರಿಯಾ ಮಹಾರಾಣಿಯ ಪ್ರಕಟಣೆಯು 1858 ರ ನವೆಂಬರ್–1 ರಲ್ಲಿ ಪ್ರಕಟಣೆಯಾಯಿತು. ನಿಯಂತ್ರಣ ಮಂಡಳಿ ಮತ್ತು ನಿರ್ದೇಶಕರ ಮಂಡಳಿಯನ್ನು ರದ್ದುಗೊಳಿಸಲಾಯಿತು. ಅವುಗಳ ಅಧಿಕಾರವನ್ನು ರಾಜ್ಯ ಕಾರ್ಯದರ್ಶಿಯನ್ನೊಳಗೊಂಡ ಒಂದು ಮಂಡಳಿಗೆ ವಹಿಸಲಾಯಿತು. ಭಾರತದ ಗೌರ್ನರ್ ಜನರಲ್‌ನನ್ನು ವೈಸ್‌ರಾಯ್ ಎಂದು ಕರೆಯಲಾಯಿತು. ವೈಸ್‌ರಾಯ್ ಎಂದರೆ ಸರ್ಕಾರದ ಪ್ರತಿನಿಧಿ ಎಂದರ್ಥ. ಭಾರತದ ಸೈನಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾವಣೆ ಮಾಡಲಾಯಿತು. ಭಾರತದ ಪೂರ್ಣ ಧಾರ್ಮಿಕ ಸ್ವಾತಂತ್ರ್ಯವನ್ನು ಅಂಗೀಕರಿಸಲಾಯಿತು. ಬ್ರಿಟಿಷರು ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಕೈಬಿಟ್ಟರು. ಇದಲ್ಲದೆ ಬ್ರಿಟಿಷರು ಇನ್ನು ಮುಂದೆ ಯಾವುದೇ ಸಂಸ್ಥಾನವನ್ನು ವಿಲೀನ ಮಾಡಿಕೊಳ್ಳುವುದಿಲ್ಲವೆಂಬ ವಾಗ್ದಾನವನ್ನು ಭಾರತದ ಅರಸರಿಗೆ ನೀಡಿದರು.

### ವಿಕ್ಟೋರಿಯಾ ಮಹಾರಾಣಿಯ ಪ್ರಕಟಣೆ 1858

ಕ್ರಿ.ಶ.1858 ನವೆಂಬರ್–1 ರಂದು ಅಲಹಬಾದ್ ಸಮ್ಮೇಳನದಲ್ಲಿ ಮಹಾರಾಣಿಯ ಪ್ರಕಟಣೆಯನ್ನು ಘೋಷಿಸಲಾಯಿತು. ಇದನ್ನು ಭಾರತದ ಕೊನೆಯ ಗೌರ್ನರ್ ಜನರಲ್ ಪ್ರಥಮ ವೈಸ್‌ರಾಯಿಯು ಆದ ಲಾರ್ಡ್ ಕ್ಯಾನಿಂಗ್ ಪ್ರಕಟ ಪಡಿಸಿದನು.

### ಮುಖ್ಯಾಂಶಗಳು

ಭಾರತದ ಆಡಳಿತವನ್ನು ಇನ್ನು ಮುಂದೆ ಇಂಗ್ಲೆಂಡಿನ ರಾಣಿಯು ಹೆಸರಿನಲ್ಲಿ ನಿರ್ವಹಿಸುವುದೆಂದು ತಿಳಿಸಲಾಯಿತು. ನಿಯಂತ್ರಣ ಮಂಡಳಿ ಮತ್ತು ನಿರ್ದೇಶಕ ಮಂಡಳಿಯನ್ನು ವಿಸರ್ಜಿಸಿ ಭಾರತದ ರಾಜ್ಯ ಕಾರ್ಯದರ್ಶಿ ಪದವಿಯನ್ನು ರೂಪಿಸಲಾಯಿತು. ಇವರಿಗೆ ಸಹಾಯ ಮಾಡಲು 15 ಮಂದಿ ಸದಸ್ಯರನ್ನೊಳಗೊಂಡ ಮಂಡಳಿಯನ್ನು ರಚಿಸಿತು. ಇದು ಭಾರತದ ಆಡಳಿತವನ್ನು ನಿರ್ವಹಿಸುತ್ತಿತ್ತು. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಕೈಬಿಡಲಾಯಿತು. ಕೊಲೆಯ ಆಪಾದನೆಗೆ ಒಳಗಾದವರನ್ನು ಬಿಟ್ಟು ಉಳಿದ ಎಲ್ಲಾ ಕ್ರಾಂತಿಕಾರರಿಗೂ ಸಾರ್ವತ್ರಿಕ ಕ್ಷಮಾದಾನ (General Amnesty) ನೀಡುವುದೆಂದು ಪ್ರಕಟಿಸಲಾಯಿತು.

## ಅಭ್ಯಾಸ

**I) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. 1857 ರ ಮಹಾ ಕ್ರಾಂತಿಯು __________ ಎಂಬುವವರ ಕಾಲದಲ್ಲಿ ಆರಂಭವಾಯಿತು.

   ಅ) ಬೆಂಟಿಂಕ್    ಆ) ಕ್ಯಾನಿಂಗ್    ಇ) ಡಾಲ್‌ಹೌಸಿ

2. ಸಿಪಾಯಿ ದಂಗೆಯು ಪ್ರಥಮವಾಗಿ ಆರಂಭವಾದ ಸ್ಥಳ __________ .

   ಅ) ಬ್ಯಾರಕ್‌ಪುರ    ಆ) ದೆಹಲಿ    ಇ) ಕಾನ್ಪುರ

3. ಕೊಬ್ಬು ಲೇಪಿಸಿದ ತೋಟಾಗಳ ಉಪಯೋಗವನ್ನು ನಿರಾಕರಿಸಿದ ಮೊದಲ ಸಿಪಾಯಿ __________ .

   ಅ) ಮಂಗಳಪಾಂಡೆ    ಆ) ನಾನಾಸಾಹೇಬ    ಇ) ಬಹದ್ದೂರ್ ಷಾ

4. 1857 ರ ಸಿಪಾಯಿ ದಂಗೆಗೆ __________ ಮುಖ್ಯವಾದ ರಾಜಕೀಯ ಕಾರಣವಾಗಿದ್ದಿತು.

   ಅ) ಅಧಿಕ ತೆರಿಗೆ    ಆ) ದ್ವಿಗುಣಾಡಳಿತ    ಇ) ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿ

**II) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರದಿಂದ ಭರ್ತಿ ಮಾಡಿರಿ.**

1. ಬ್ರಿಟಿಷರ ಆಳ್ವಿಕೆಗೆ ವಿರೋಧವಾಗಿ ಭಾರತೀಯರು ಅನುಭವಿಸಿದ ತೊಂದರೆಯ ಪ್ರತಿಫಲ __________ .

2. 1857 ರಲ್ಲಿ ಆರಂಭವಾದ ಮಹಾಕ್ರಾಂತಿಯನ್ನು ______________ ಎಂದು ಕರೆಯುತ್ತಾರೆ.

3. ______________ ಪರಿಚಯಿಸಿದುದು 1857 ರ ಕ್ರಾಂತಿಗೆ ತಕ್ಷಣದ ಕಾರಣವಾಯಿತು.

4. ಸರ್ ಜಾನ್ ನಿಕಲ್‌ಸನ್ ಮುಂದಾಳತ್ವದಲ್ಲಿ ಬ್ರಿಟಿಷರು ವಶಪಡಿಸಿಕೊಂಡ ಸ್ಥಳ ____________ .

**III) ಹೊಂದಿಸಿ ಬರೆಯಿರಿ.**

| | | |
|---|---|---|
| 1. | ಮಂಗಳಪಾಂಡೆ | ಮಧ್ಯ ಭಾರತ |
| 2. | ತಾಂತ್ಯಾಟೋಪೆ | ಕಾನ್ಪುರ |
| 3. | ಲಾರ್ಡ್ ಕ್ಯಾನಿಂಗ್ | ನಾನಾ ಸಾಹೇಬನ ಸೇನಾಧಿಪತಿ |
| 4. | ರಾಣಿ ಲಕ್ಷ್ಮಿಬಾಯಿ | ಪ್ರಥಮ ವೈಸ್‌ರಾಯ್ |

**IV) ಒಂದು ಪದದಲ್ಲಿ ಉತ್ತರಿಸಿ.**

1. 1857 ರ ಕ್ರಾಂತಿಯು ಪ್ರಥಮವಾಗಿ ಯಾರಿಂದ ಎಲ್ಲಿ ಆರಂಭವಾಯಿತು ?
2. ಬ್ರಿಟಿಷರು ದುರಾಡಳಿತದ ನೆಪದ ಮೇಲೆ ಆಕ್ರಮಿಸಿಕೊಂಡ ರಾಜ್ಯಗಳು ಯಾವುವು ?
3. 1857 ರ ಕ್ರಾಂತಿಯ ಸಮಯದಲ್ಲಿ ರಾಣಿ ಲಕ್ಷ್ಮಿಬಾಯಿಯೊಡನೆ ಸೇರಿ ಯುದ್ಧ ಮಾಡಿದವರು ಯಾರು ?
4. 1857 ರ ಕ್ರಾಂತಿಯ ನಂತರ ಭಾರತದ ಆಳ್ವಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡವರು ಯಾರು?

**V) ಸಂಕ್ಷಿಪ್ತವಾಗಿ ಉತ್ತರಿಸಿ.**

1. ಮಂಗಳಪಾಂಡೆಯನ್ನು ಬ್ರಿಟಿಷರು ಏಕೆ ನೇಣು ಹಾಕಿದರು ?
2. 1857 ರ ಮಹಾಕ್ರಾಂತಿಯ ಸ್ವರೂಪವನ್ನು ಸಂಕ್ಷಿಪ್ತವಾಗಿ ಬರೆಯಿರಿ.
3. ಝಾನ್ಸಿ ರಾಣಿ ಲಕ್ಷ್ಮಿಬಾಯಿ-ಲಘು ಟಿಪ್ಪಣಿ ಬರೆಯಿರಿ.

**VI) ವಿವರವಾಗಿ ಉತ್ತರಿಸಿ.**

1. 1857 ರಲ್ಲಿ ಏರ್ಪಟ್ಟ ಮಹಾಕ್ರಾಂತಿಯ ಕಾರಣಗಳನ್ನು ಬರೆಯಿರಿ.
2. 1857 ರ ಮಹಾಕ್ರಾಂತಿಯ ಸೋಲಿಗೆ ಕಾರಣಗಳು ಯಾವುವು ?
3. 1857 ರ ಕ್ರಾಂತಿಯ ಫಲಿತಾಂಶ ಮತ್ತು ಮಹಾರಾಣಿಯ ಪ್ರಕಟಣೆಯನ್ನು ಕುರಿತು ಚರ್ಚಿಸಿ.

## ರಚನಾತ್ಮಕ ಮೌಲ್ಯಮಾಪನ

1. **ಗುಂಪುಚರ್ಚೆ :**
ಬ್ರಿಟಿಷರ ವಿರುದ್ಧವಾಗಿ ನಡೆದ ಹಿಂದಿನ ಕ್ರಾಂತಿಗಳ ಬಗ್ಗೆ ತರಗತಿಯಲ್ಲಿ ಗುಂಪುಚರ್ಚೆ ಮಾಡುವುದು.

2. **ನಾಟಕ–ನಟನೆ ಮಾಡುವಿಕೆ :**
"ಝಾನ್ಸಿ ರಾಣಿ ಲಕ್ಷ್ಮಿ ಬಾಯಿ – ವೀರತ್ವದ ಪ್ರತೀಕ".

3. **ಸಂವಾದ :**
1857 ರಲ್ಲಿ ಮಹಾಕ್ರಾಂತಿಯು ಸೋಲನ್ನು ಕಂಡರೂ ಜನರ ನಡುವೆ ರಾಷ್ಟ್ರೀಯ ಭಾವನೆಯನ್ನು ಉತ್ತೇಜಿಸಿತು. ಈ ಕ್ರಾಂತಿಯು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಕರೆಯಲ್ಪಟ್ಟ ಕಾರಣಗಳನ್ನು ತರಗತಿಯಲ್ಲಿ ಸಂವಾದ ನಡೆಸಿ.

4. **ಪ್ರಬಂಧ ಬರೆಯುವಿಕೆ :**
ವಿಕ್ಟೋರಿಯಾ ಮಹಾರಾಣಿಯ ಮಹಾಪ್ರಕಟಣೆ "ಭಾರತದ ಮಹಾ ಶಾಸನ" – ಈ ಶೀರ್ಷಿಕೆಯಲ್ಲಿ ಪ್ರಬಂಧವೊಂದನ್ನು ಬರೆಯಿರಿ.

# 4. ತಮಿಳುನಾಡಿನಲ್ಲಿ ನಾಯಕರುಗಳ ಆಳ್ವಿಕೆ

ವಿಜಯನಗರ ಸಾಮ್ರಾಜ್ಯದ ವಿಸ್ತರಣೆಯು ಕೊನೆಯಲ್ಲಿ ತಮಿಳುನಾಡಿನಲ್ಲಿ ನಾಯಕರುಗಳ ಆಳ್ವಿಕೆಯನ್ನು ಉಂಟುಮಾಡಿತು. ನಾಯಕ ಎಂಬ ಪದಕ್ಕೆ "ಅಧ್ಯಕ್ಷ" ಅಥವಾ "ಮುಖ್ಯಸ್ಥ" ಎಂದರ್ಥ. ವಿಜಯನಗರದ ಅರಸರಲ್ಲಿ ಕಾರ್ಯಕರ್ತರಾಗಿ ತಮಗೆ ಕೊಡಲ್ಪಟ್ಟ ಭೂಭಾಗಗಳನ್ನು ಆಳ್ವಿಕೆ ಮಾಡಿದವರು ನಾಯಕರುಗಳು. ಇವರ ಆಳ್ವಿಕೆಯನ್ನು ತಮಿಳುನಾಡಿನಲ್ಲಿ ನಾಯಕರ ಆಳ್ವಿಕೆ ಎಂದು ಕರೆಯುತ್ತಾರೆ. ಇವರು ಮಧುರೈ, ತಂಜಾವೂರು, ಸೆಂಜಿ (ಜಿಂಜಿ) ಇವುಗಳನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ಮಾಡಿದರು.

## ಮಧುರೈ ನಾಯಕರುಗಳು

ವಿಜಯನಗರ ಸಾಮ್ರಾಜ್ಯದಲ್ಲಿ ಮಧುರೈ ದಕ್ಷಿಣ ಮಂಡಲದ ಭಾಗವಾಗಿದ್ದಿತು. ಕ್ರಿ.ಶ. 1529 ರಲ್ಲಿ ಮಧುರೆಯ ಪ್ರತಿನಿಧಿಯಾಗಿ ವಿಶ್ವನಾಥನಾಯಕ ಎಂಬುವವರು ಕೃಷ್ಣದೇವರಾಯನಿಂದ ನೇಮಿಸಲ್ಪಟ್ಟರು. ಇದನ್ನೇ ಮಧುರೈ ನಾಯಕರ ಆಳ್ವಿಕೆಯ ಪ್ರಾರಂಭ ಎಂದು ಅಭಿಪ್ರಾಯಪಡಲಾಗಿದೆ.

## ವಿಶ್ವನಾಥ ನಾಯಕರು

ವಿಶ್ವನಾಥ ನಾಯಕರು ಕೃಷ್ಣದೇವರಾಯನ ಆತ್ಮೀಯ ಸೇನಾಧಿಪತಿ. ಮಧುರೆಯಲ್ಲಿ ದಂಗೆ ಏರ್ಪಟ್ಟಾಗ ಅದನ್ನು ಹತ್ತಿಕ್ಕಲು ವಿಶ್ವನಾಥನಾಯಕರನ್ನು ಕಳುಹಿಸಿದನು. ದಂಗೆಯನ್ನು ಅಡಗಿಸಿ ಮಧುರೈಯನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಂಡರು.

ವಿಶ್ವನಾಥ ನಾಯಕರು ತಮ್ಮ ಶಾಂತಿಯುತ ಸಮರ್ಥ ಆಳ್ವಿಕೆಯ ಮೂಲಕ ಉತ್ತಮವಾಗಿ ಆಳ್ವಿಕೆ ಮಾಡಿದರು. ತಮ್ಮ ಮಂತ್ರಿ ಆರ್ಯನಾಥ ಎಂಬುವವನ ಸಹಾಯದೊಡನೆ "ಪಾಳೆಯಗಾರರ ಪದ್ಧತಿ" ಎಂಬ ಹೊಸ ಆಡಳಿತ ಪದ್ಧತಿಯನ್ನು ಪರಿಚಯಿಸಿದರು. ತಮ್ಮ ಸಾಮ್ರಾಜ್ಯದ ಶಾಂತಿ, ಸುಭದ್ರತೆಯನ್ನು ನಿರ್ವಹಿಸಲು ಪಾಳೆಗಾರರನ್ನು ನೇಮಕ ಮಾಡಿದರು. ಇವರು ತಮಗೆ ವಹಿಸಲ್ಪಟ್ಟ ಭಾಗಗಳ ಸೇನೆ, ಆರಕ್ಷಕ (ಪೊಲೀಸ್) ಮತ್ತು ಕಂದಾಯ ಆಡಳಿತವನ್ನು ನೋಡಿಕೊಂಡರು. ಆರಕ್ಷಣಾ ಕಾರ್ಯವು ಮುಖ್ಯವಾದದ್ದು ಎಂದು ಪರಿಗಣಿಸಲ್ಪಟ್ಟಿತ್ತು. ಜನರು "ಆರಕ್ಷಣ ಭಿಕ್ಷೆ" (ಕಾವಲ್ ಪಿಚ್ಚೈ) ಎಂಬ ತೆರಿಗೆಯನ್ನು ಗೌರವಧನವಾಗಿ ಪಾಳೆಯಗಾರರಿಗೆ ಸಲ್ಲಿಸುತ್ತಿದ್ದರು.

ವಿಶ್ವನಾಥ ನಾಯಕರ ನಂತರ ಹಲವಾರು ಅರಸರು ಆಳ್ವಿಕೆ ನಡೆಸಿದರು. ಅವರಲ್ಲಿ ಅತ್ಯಂತ ಪ್ರಮುಖರಾದವರು ತಿರುಮಲೈ ನಾಯಕರು.

## ತಿರುಮಲೈ ನಾಯಕರು

ಮಧುರೈ ನಾಯಕರ ಇತಿಹಾಸದಲ್ಲಿ ತಿರುಮಲೈ ನಾಯಕರ ಆಳ್ವಿಕೆಯ ಕಾಲವು ಒಂದು ಹೊಸ ಶತಾಬ್ಧಿ ಎಂದು ಭಾವಿಸಲಾಗಿದೆ. ಅವರ ಆಳ್ವಿಕೆಗೂ ಮೊದಲು ಆರು ಮಂದಿ ಅರಸರು ಮಧುರೆಯನ್ನು ಆಳಿದರು.


## ವಿಜಯಗಳು

ತಿರುಮಲೈ ನಾಯಕರು ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡ ತಕ್ಷಣವೇ ಮೈಸೂರು ಸೇನೆಯು, ಮಧುರೈ ಮಾರ್ಗವಾಗಿ ದಂಡೆತ್ತಿ ಹೋಯಿತು. ಆದರೆ, ಅವರನ್ನು ತಿರುಮಲೈ ನಾಯಕರು ದಿಂಡುಗಲ್ ಎಂಬಲ್ಲಿ ಸೋಲಿಸಿದರು. ತಿರುವಾಂಕೂರಿನ ಅರಸ ಉನ್ನಿಕೇರಳವರ್ಮನು ಸಲ್ಲಿಸುತ್ತಿದ್ದ ಕಾಣಿಕೆಯನ್ನು ನಿಲ್ಲಿಸಿಬಿಟ್ಟನು. ಆದ್ದರಿಂದಲೇ ತಿರುಮಲೈ ನಾಯಕರು ಅವರ ವಿರುದ್ಧವಾಗಿ ಸೈನ್ಯವನ್ನು ಕಳುಹಿಸಿ ಅವರನ್ನು ಸೋಲಿಸಿ ಕ್ರಮವಾಗಿ ಕಾಣಿಕೆಯನ್ನು ಸಲ್ಲಿಸುವಂತೆ ಮಾಡಿದರು. ಮುಸ್ಲಿಮರು ತಮಿಳುನಾಡಿನ ಮೇಲೆ ದಾಳಿ ಮಾಡಲು ತಿರುಮಲೈ ನಾಯಕರು ಮೂಲ ಕಾರಣರು. ವಿಜಯನಗರದ ಅರಸ 3ನೇ ಶ್ರೀರಂಗನು ಮಧುರೈ ಮೇಲೆ ದಂಡೆತ್ತಿ ಬಂದಾಗ ಇದನ್ನು ನಿಭಾಯಿಸಲು ತಿರುಮಲೈ–ನಾಯಕರು ಜಿಂಜಿ ಮತ್ತು ತಂಜಾವೂರು ನಾಯಕರುಗಳೊಡನೆ ಒಪ್ಪಂದ ಮಾಡಿಕೊಂಡರು. ಆದರೆ, ತಂಜಾವೂರು ನಾಯಕರುಗಳು ಸರಿಯಾಗಿ ಸಹಾಯ ಮಾಡಲಿಲ್ಲವಾದ್ದರಿಂದ, ತಿರುಮಲೈ ನಾಯಕರು ಗೋಲ್ಕೊಂಡ ಸುಲ್ತಾನನ ಸಹಾಯವನ್ನು ಬಯಸಿ ಸುಲ್ತಾನನನ್ನು ವೆಲ್ಲೊರಿನ ಮೇಲೆ ದಂಡೆತ್ತಿ

ಬರುವಂತೆ ಕೇಳಿಕೊಂಡರು. ಹೀಗಾಗಿ ಮುಸ್ಲಿಮರು ವೆಲ್ಲೂರನ್ನು ವಶಪಡಿಸಿಕೊಂಡು, ಮಧುರೈಯನ್ನು ವಶಪಡಿಸಕೊಳ್ಳಲು ಬೆದರಿಕೆ ಹಾಕಿದರು. ತಮ್ಮ ತಪ್ಪನ್ನು ಅರಿತ ತಿರುಮಲೈ ನಾಯಕರು ಮೈಸೂರಿನ ಅರಸರ ಸಹಾಯವನ್ನು ಬಯಸಿದರು. ಮೈಸೂರಿನ ಅರಸರು ತಮ್ಮ ಸೇನೆಯನ್ನು ಕಳುಹಿಸಿದರು. ಆ ಸೇನೆಯು ಸತ್ಯಮಂಗಲದಲ್ಲಿ ನಡೆದ ಯುದ್ಧದಲ್ಲಿ ಜಯಗಳಿಸಿ ದಿಂಡುಗಲ್ಲನ್ನು ತಲುಪಿತು. ಈ ಯುದ್ಧದಲ್ಲಿ ಮೈಸೂರಿನ ಸೈನಿಕರು ವಿರೋಧಿಗಳ ಮೂಗುಗಳನ್ನು ಮತ್ತು ಮೇಲ್ದುಟಿಗಳನ್ನು ಕತ್ತರಿಸಿದರು. ಇಂತಹ ಅಮಾನುಷ ಕೃತ್ಯವನ್ನು ಕಂಡು ಮಧುರೈ ಜನರು ಭಯಗೊಂಡರು. ನಂತರ ತಿರುಮಲೈ ನಾಯಕರು ಮೈಸೂರು ಸೇನೆಯನ್ನು ಸೋಲಿಸಿ ವಿರೋಧಿಗಳ ಮೂಗುಗಳನ್ನು ಕತ್ತರಿಸಿದರು. ಈ ವಿನೋದವಾದ ಯುದ್ಧವು "ಮೂಗು ಕತ್ತರಿಸುವ ಯುದ್ಧ" ಎಂದು ಕರೆಯಲ್ಪಟ್ಟಿತು.

### ಇತರೆ ಸಾಧನೆಗಳು

ತಿರುಮಲೈ ನಾಯಕರು ಒಬ್ಬ ಸಮರ್ಥ ಆಡಳಿತಗಾರ. ಸಾಮ್ರಾಜ್ಯದಲ್ಲಿ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡಿದರು. ಇವರು ಪೋರ್ಚುಗೀಸರು ಮತ್ತು ಡಚ್ಚರುಗಳಿಗೆ ತಮಿಳುನಾಡಿನಲ್ಲಿ ಸ್ವತಂತ್ರವಾಗಿರಲು ಅನುಮತಿ ನೀಡಿದ್ದರು. ರಾಜಧಾನಿಯನ್ನು ತಿರುಚ್ಚಿಯಿಂದ ಮಧುರೈಗೆ ಬದಲಾಯಿಸಿದರು. ಹಲವಾರು ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿದರು. ಇವರು ದೇವಾಲಯಗಳ ಆಡಳಿತವನ್ನು ನೇರವಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. ಅವರು ದೇವಾಲಯಗಳನ್ನು ನಿರ್ವಹಣೆ ಮಾಡಲು ಹಲವಾರು ಗ್ರಾಮಗಳನ್ನು ದಾನವಾಗಿ ನೀಡಿದ್ದರು. ಹೊಸಮಂಟಪ, ಮಾರಮ್ಮನ ತೆಪ್ಪದಕೊಳ ಮತ್ತು ತಿರುಮಲೈ ನಾಯಕರ ಮಹಲ್ ಇವುಗಳು ತಿರುಮಲೈ ನಾಯಕರ ಕಾಲದಲ್ಲಿ ಕಟ್ಟಲ್ಪಟ್ಟವುಗಳಾಗಿವೆ. ಇವರು ಪ್ರಸಿದ್ಧ ಸಂಸ್ಕೃತ ಪಂಡಿತ ನೀಲಕಂಠದೀಕ್ಷಿತರಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿದ್ದರು.



ತಿರುಮಲೈ ನಾಯಕರ ಮಹಲ್

### ರಾಣಿ ಮಂಗಮ್ಮಾಳ್

ತಿರುಮಲೈ ನಾಯಕರ ನಂತರ ಆಳ್ವಿಕೆ ನಡೆಸಿ ಪ್ರಖ್ಯಾತರಾದವರು ರಾಣಿ ಮಂಗಮ್ಮಾಳ್. ಇವರು ಚೊಕ್ಕನಾಥ ನಾಯಕರ ಹೆಂಡತಿ. ತಮ್ಮ 3 ವರ್ಷದ ಮೊಮ್ಮಗನಾದ ವಿಜಯರಂಗಚೊಕ್ಕನಾಥರ ಪೋಷಕರಾಗಿ (ರಾಜಪ್ರತಿನಿಧಿ) ಆಳ್ವಿಕೆ ವಹಿಸಿಕೊಂಡರು.

ಇವರ ಆಳ್ವಿಕೆಯ ಕಾಲವು ಮಧುರೈ ನಾಯಕರ ಇತಿಹಾಸದಲ್ಲಿ ಬಹು ಮುಖ್ಯತ್ವವನ್ನು ಹೊಂದಿದೆ. ರಾಜತಂತ್ರ ನಿಪುಣೆಯಾಗಿ ಮಧುರೈ ನಾಯಕರ ಆಳ್ವಿಕೆಗೆ ಏರ್ಪಟ್ಟ ಆಪತ್ತುಗಳನ್ನು ಸಮರ್ಥವಾಗಿ ನಿಭಾಯಿಸಿ ಸಾಮ್ರಾಜ್ಯವನ್ನು ರಕ್ಷಿಸಿದರು. ಇವರು ಕ್ರೈಸ್ತಧರ್ಮ ಪ್ರಚಾರಕರನ್ನು ಹೆಚ್ಚಾಗಿ ಪ್ರೋತ್ಸಾಹಿಸಿದರು. ಪವಿತ್ರ ಯಾತ್ರಾಸ್ಥಳಗಳಲ್ಲಿ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಪ್ರಜೆಗಳಿಗೆ ಸಹಾಯ ಮಾಡಿದರು. ಸಂಚಾರ ಸೌಕರ್ಯಗಳು ಸುರಕ್ಷಿತವಾಗಿ ಬದಲಾಯಿಸಲ್ಪಟ್ಟವು. ಅವರು ರಸ್ತೆಗಳಲ್ಲಿ ನೆರಳು ಕೊಡುವ ಗಿಡಗಳನ್ನು ನೆಟ್ಟರು. ಅಲ್ಲಲ್ಲಿ ಧರ್ಮ ಛತ್ರಗಳು ಮತ್ತು ಉಚಿತ ಭೋಜನಾಲಯಗಳನ್ನು ಸ್ಥಾಪಿಸಿ ಪವಿತ್ರ ಯಾತ್ರೆ ಮಾಡುವವರಿಗೆ ಹಲವಾರು ಸಹಾಯಗಳನ್ನು ಮಾಡಿದ್ದರು. ದೇವಾಲಯಗಳಿಗೆ ಉದಾರವಾಗಿ ದಾನ ಮಾಡಿದರು. ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟರು. ಉಯ್ಯಕ್ಕೊಂಡಾನ್ ಕಾಲುವೆಯು ಇಂದೂ ಸಹ ಇವರ ಹಿರಿಮೆಗಳನ್ನು ಎತ್ತಿ ಹಿಡಿದಿದೆ.

### ಮೀನಾಕ್ಷಿ

ವಿಜಯರಂಗ ನಾಯಕರು ಗಂಡು ಸಂತತಿಯಿಲ್ಲದೆಯೇ ಮರಣ ಹೊಂದಿದರು. ಅವರ

ಹೆಂಡತಿ ಮೀನಾಕ್ಷಿಯು ಉತ್ತರಾಧಿಕಾರಿಯಾಗಿ ಮಧುರೆಯ ಆಡಳಿತ ಜವಾಬ್ದಾರಿ ವಹಿಸಿಕೊಂಡರು. ವಿಜಯಕುಮಾರ ನಾಯಕ ಎಂಬುವವರನ್ನು ದತ್ತು ತೆಗೆದುಕೊಂಡು ಅವರ ಪೋಷಕಳಾಗಿ ಮೀನಾಕ್ಷಿಯು ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದರು. ತನ್ನ ಸಾಕು ಮಗನ ತಂದೆಯಾದ ಬಂಗಾರು ಆಳ್ವಿಕೆಯನ್ನು ವಶಪಡಿಸಿಕೊಳ್ಳಲು ಸಂಚು ಹೂಡಿದನು.

ಇದನ್ನು ತಿಳಿದ ಮೀನಾಕ್ಷಿ ಆರ್ಕಾಟಿನಲ್ಲಿದ್ದ ಕರ್ನಾಟಿಕ್ ನವಾಬನಾಗಿದ್ದ ಚಂದಾಸಾಹೇಬನ ಸಹಾಯವನ್ನು ಬಯಸಿದರು. ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡರು. ಚಂದಾಸಾಹೇಬನು ಬಂಗಾರುವನ್ನು ಸೋಲಿಸಿ ಮೀನಾಕ್ಷಿಯನ್ನು ರಕ್ಷಿಸಿದನು. ಆದರೆ, ತನ್ನ ಮಾತನ್ನು ಮೀರಿದ ಚಂದಾಸಾಹೇಬನು ಮಧುರೈಯನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಮೀನಾಕ್ಷಿಯನ್ನು ಬಂಧಿಸಿ ಅವರ ಸ್ವಂತ ಅರಮನೆಯಲ್ಲಿಯೇ ಅವರನ್ನು ಸೆರೆಯಲ್ಲಿಡಲಾಯಿತು. ಇದರಿಂದ ಮನನೊಂದ ಮೀನಾಕ್ಷಿಯು ಸೆರೆಮನೆಯಲ್ಲಿ ವಿಷ ಸೇವಿಸಿ ಪ್ರಾಣ ಬಿಟ್ಟರು. ಚಂದಾ ಸಾಹೇಬ್ ಮಧುರೈಯನ್ನು ತನ್ನ ಸಾಮ್ರಾಜ್ಯದೊಡನೆ ಸೇರಿಸಿಕೊಂಡನು. ಹೀಗೆ ಮಧುರೈ ನಾಯಕರ ಆಳ್ವಿಕೆಯು ಕ್ರಿ.ಶ. 1736 ರಲ್ಲಿ ಮುಕ್ತಾಯಕ್ಕೆ ಬಂದಿತು.

## ತಂಜಾವೂರು ನಾಯಕರುಗಳು

ತಂಜಾವೂರು ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ತಿಮ್ಮಪ್ಪನಾಯಕ ಎಂಬುವವರು ತಂಜಾವೂರಿನ ಅಧಿಕಾರವನ್ನು ವಹಿಸಿಕೊಂಡಿದ್ದರು. ಇವರ ನಂತರ ಇವರ ಮಗನಾದ ಸೇವಪ್ಪನಾಯಕರು ಅಧಿಕಾರ ವಹಿಸಿಕೊಂಡರು.

## ಸೇವಪ್ಪನಾಯಕರು

ಸೇವಪ್ಪನಾಯಕರು ತಂಜಾವೂರಿನಲ್ಲಿ ಸ್ವತಂತ್ರ ನಾಯಕರ ಆಳ್ವಿಕೆಯನ್ನು ಸ್ಥಾಪಿಸಿದರು. ಹಿಂದೂ ದೇವಾಲಯಗಳ ಮೇಲೆ ವಿಶೇಷ ಗಮನ ಹರಿಸಲಾಯಿತು. ಪೋರ್ಚುಗೀಸರಿಗೆ ನಾಗಪಟ್ಟಣದಲ್ಲಿ ವಾಸಿಸಲು ಅನುಮತಿ ನೀಡಿದರು. ಮೂವಲೂರು ದೇವಾಲಯಕ್ಕೆ 10 ವೇಲಿ ಭೂಮಿಯನ್ನು ದಾನವಾಗಿ ನೀಡಿದರು. ಶಿವಗಂಗೆಯ ಸರೋವರವನ್ನು ದುರಸ್ಥಿಗೊಳಿಸಿದರು. ಅದು ನಂತರ "ಸೇವಪ್ಪನೇರಿ" ಎಂದು ಕರೆಯಲ್ಪಟ್ಟಿತು. ಇವರು ತಿರುವಣ್ಣಾಮಲೈ ಮತ್ತು ವಿರುದಾಚಲ ದೇವಾಲಯಗಳಿಗೆ ಅನುದಾನ ನೀಡಿದರು.

## ಅಚ್ಚುತಪ್ಪನಾಯಕರು

ಸೇವಪ್ಪನಾಯಕರ ನಂತರ ಅವರ ಮಗನಾದ ಅಚ್ಚುತಪ್ಪನಾಯಕರು ಆಳ್ವಿಕೆಗೆ ಬಂದರು. ವಿಜಯನಗರದ ಅರಸರೊಡನೆ ಸೌಹಾರ್ದಯುತ ಸಂಬಂಧವನ್ನು ಏರ್ಪಡಿಸಿಕೊಂಡರು. ತಾಳಿಕೋಟೆ ಯುದ್ಧದಲ್ಲಿ ವಿಜಯನಗರದ ಅರಸರಿಗೆ ಸಹಾಯ ಮಾಡಿದರು. ಶ್ರೀರಂಗಂನಲ್ಲಿರುವ ಶ್ರೀ ರಂಗನಾಥಸ್ವಾಮಿಗೆ ವಜ್ರ ಸಿಂಹಾಸನವನ್ನು ನೀಡಿದರು. ರಾಮೇಶ್ವರಂ ದೇವಾಲಯಕ್ಕೆ ದತ್ತಿಯನ್ನು ನೀಡಿದರು. ತಿರುವಣ್ಣಾಮಲೈ ಶ್ರೀ ಅರುಣಾಚ್ಚಲೇಶ್ವರ ದೇವಾಲಯದ ಗೋಪುರವನ್ನು ಕಟ್ಟಿ ಮುಗಿಸಿದರು. ಕಾವೇರಿ ನದಿಯ ಎರಡೂ ದಡಗಳನ್ನು ದುರಸ್ಥಿಗೊಳಿಸಿ ನವೀಕರಿಸಿ ನದಿ ನೀರನ್ನು ವ್ಯವಸಾಯಕ್ಕೆ ಹೆಚ್ಚು ಅನುಕೂಲವಾಗುವಂತೆ ಮಾಡಿದರು.

## ರಘುನಾಥನಾಯಕ

ಅಚ್ಚುತಪ್ಪನಾಯಕರ ನಂತರ ಅವರ ಕಿರಿಯ ಮಗ ರಘುನಾಥ ನಾಯಕರು ಆಳ್ವಿಕೆಗೆ ಬಂದರು. ಇವರ ಆಳ್ವಿಕೆಯ ಕಾಲವು ತಂಜಾವೂರು ನಾಯಕರ ಇತಿಹಾಸದಲ್ಲಿಯೇ ಅತೀ ಮುಖ್ಯತ್ವವನ್ನು ಪಡೆದುದಾಗಿದೆ. ಜಿಂಜಿ ನಾಯಕರುಗಳು, ಮಧುರೈ ನಾಯಕರುಗಳು ಮತ್ತು ಜಾಫ್ನಾದ ಪೋರ್ಚುಗೀಸರನ್ನು ಗೆದ್ದು ಅವರನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ಇವರು ಕಲೆ, ಲಿಪಿ ಮತ್ತು ವಿದ್ವಾಂಸರನ್ನು ಪ್ರೋತ್ಸಾಹಿಸಿದರು. ತಾವೇ ಒಬ್ಬ ಶ್ರೇಷ್ಠ ಕವಿಯಾಗಿದ್ದರು. ರುಕ್ಮಿಣಿಪರಿಣಯಂ, ಪಾರಿಜಾತಂ, ಪುಷ್ಪಕರ್ಣಂ, ರಾಮಾಯಣ ಈ ಕೃತಿಗಳನ್ನು ತೆಲುಗು ಭಾಷೆಯಲ್ಲಿ ಬರೆದಿದ್ದಾರೆ.


## ವಿಜಯರಾಘವ ನಾಯಕರು

ರಘುನಾಥನಾಯಕರ ನಂತರ ಅವರ ಮಗನಾದ ವಿಜಯರಾಘವನಾಯಕರು ಆಳ್ವಿಕೆಗೆ ಬಂದರು. ಇವರು ಅಶಕ್ತ, ಅನರ್ಹ ಹಾಗೂ ನಾಡನ್ನು ರಕ್ಷಿಸುವಲ್ಲಿ ಅಸಮರ್ಥರಾಗಿದ್ದರು. ಇವರು

ತಂಜಾವೂರು ನಾಯಕರ ವಂಶದ ಕೊನೆಯ ಅರಸ. ಮಧುರೈ ನಾಯಕರಾದ ಚೊಕ್ಕನಾಥನಾಯಕರು ತಂಜಾವೂರಿನ ಮೇಲೆ ದಂಡೆತ್ತಿ ಬಂದು ವಿಜಯರಾಘವನಾಯಕರನ್ನು ಸೋಲಿಸಿ ಕೊಲೆ ಮಾಡಿ ತಂಜಾವೂರನ್ನು ತಮ್ಮ ಸಾಮ್ರಾಜ್ಯದೊಡನೆ ಸೇರಿಸಿಕೊಂಡರು. ಇದರಿಂದ ತಂಜಾವೂರಿನಲ್ಲಿ ನಾಯಕರ ಆಳ್ವಿಕೆಯು ಕ್ರಿ.ಶ. 1673 ರಲ್ಲಿ ಮುಕ್ತಾಯಕ್ಕೆ ಬಂದಿತು.

## ಸೆಂಜಿ (ಜಿಂಜಿ) ನಾಯಕರು

ಪಾಲಾರ್ ಮತ್ತು ಕೊಲ್ಲಿಡಂ ನಡುವಣ ಭಾಗಗಳು ಸೆಂಜಿ ನಾಯಕರುಗಳ ಹತೋಟಿಯಲ್ಲಿದ್ದವು. ಸೆಂಜಿ ನಾಯಕರುಗಳು ವಿಜಯನಗರ ಅರಸರ ಕುಟುಂಬದ ಸಂಬಂಧಿಯಾಗುವರು. ಇವರ ಪೂರ್ವಜರು ಉತ್ತರ ಭಾರತದಲ್ಲಿರುವ ಮಣಿನಾಗಪುರದವರು.



ಸೆಂಜಿಕೋಟೆ

ಇವರು ದಕ್ಷಿಣ ಭಾರತಕ್ಕೆ ವಲಸೆ ಬಂದು ಈ ಭಾಗದಲ್ಲಿ ವಾಸಿಸಿದರು. ಕೃಷ್ಣದೇವರಾಯನು ವೈಯಪ್ಪ ನಾಯಕ ಎಂಬುವವರನ್ನು ಸೆಂಜಿಯ ಆಡಳಿತಗಾನನ್ನಾಗಿ ನೇಮಕ ಮಾಡಿದನು. ಇವರ ನಂತರ 2ನೇ ಕೃಷ್ಣಪ್ಪ ನಾಯಕರು ಸೆಂಜಿಯ ಆಳ್ವಿಕೆಯನ್ನು ವಹಿಸಿಕೊಂಡರು. ಇವರೇ ಸೆಂಜಿಯಲ್ಲಿ ನಾಯಕರ ಆಳ್ವಿಕೆಯ ನಿಜವಾದ ಸ್ಥಾಪಕರೇ ಆಗಿದ್ದಾರೆ.

## ಎರಡನೇ ಕೃಷ್ಣಪ್ಪನಾಯಕರ ಸೇವೆ

ಎರಡನೇ ಕೃಷ್ಣಪ್ಪನಾಯಕರು ಸೆಂಜಿಯ ಪ್ರಮುಖವಾದ ಆಡಳಿತಗಾರರಾಗಿದ್ದರು. ಇವರು ತಮ್ಮ ಸಾಮ್ರಾಜ್ಯವನ್ನು ಹಲವಾರು ಭಾಗಗಳಾಗಿ ವಿಭಾಗಿಸಲ್ಪಟ್ಟಿದ್ದರು. ಪ್ರತಿಯೊಂದು ವಿಭಾಗವೂ ಅವರ ಅಧಿಕಾರಗಳಿಂದ ಆಳಲ್ಪಡುತ್ತಿತ್ತು. ಅವರು ಜನರು ವಾಸಿಸಲು ನಗರಗಳನ್ನು ಕಟ್ಟಿಸಿದರು. ಅವರು ವ್ಯವಸಾಯವನ್ನು ಪ್ರೋತ್ಸಾಹಿಸಿದರು. ಬಲಯುತವಾದ ಸೇನೆಯನ್ನು ನಿರ್ವಹಿಸಿದರು. ಅವರು ವೆಳ್ಳಾರ್ ನದಿಯ ದಡದಲ್ಲಿ "ಕೃಷ್ಣ ಪಟ್ಟಣಂ" ಎಂಬ ನಗರವನ್ನು ಸ್ಥಾಪಿಸಿದರು. ಮತಸಹಿಷ್ಣುತೆಯುಳ್ಳವರಾಗಿದ್ದರು. ಕ್ರೈಸ್ತರು ಚರ್ಚುಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದ್ದರು. ಚಿತ್ತಾಮೂರ್‌ನಲ್ಲಿ ಜೈನರಿಗೂ, ದಿಂಡಿವನಂನಲ್ಲಿ ಶೈವ ಮತದವರಿಗೂ ದೇವಾಲಯಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದರು. ಚಿದಂಬರಂನಲ್ಲಿ ಗೋವಿಂದರಾಜರ ಪ್ರತಿಮೆಯನ್ನು ನವೀಕರಿಸಿದರು. ಇವರ ಸೇನಾಪತಿ ವೆಂಕಟ ಎಂಬುವವರು "ಚೆನ್ನಸಾಗರಂ" ಎಂಬ ದೊಡ್ಡ ಕೆರೆಯನ್ನು ಸ್ವಚ್ಛಗೊಳಿಸಿ ಹೂಳು ತೆಗೆಸಿ ವ್ಯವಸಾಯವನ್ನು ಅಭಿವೃದ್ಧಿ ಪಡಿಸಿದರು.

ಕೃಷ್ಣಪ್ಪನಾಯಕರ ನಂತರ ಸೆಂಜಿಯನ್ನು ಆಳಿದವರು ಅಸಮರ್ಥರು ಮತ್ತು ಅನರ್ಹರಾಗಿದ್ದರು. ಬಿಜಾಪುರದ ಸುಲ್ತಾನನು (ಅಲಿ ಆದಿಲ್‌ಷಾ) ಕ್ರಿ.ಶ. 1648 ರಲ್ಲಿ ಸೆಂಜಿಯನ್ನು ವಶಪಡಿಸಿಕೊಳ್ಳಲು ತನ್ನ ಸೇನಾಪತಿ ಮೀರ್‌ಜುಮ್ಲಾನನ್ನು ಕಳುಹಿಸಿದನು. ಇವನು ಸೆಂಜಿಯನ್ನು ವಶಪಡಿಸಿಕೊಂಡು ನಾಸಿರ್‌ಖಾನ್ ಎಂಬುವವನನ್ನು ಅದರ ಅಧಿಕಾರಿಯಾಗಿ ನೇಮಿಸಿದನು. ಕ್ರಿ.ಶ. 1678 ರಲ್ಲಿ ಛತ್ರಪತಿ ಶಿವಾಜಿಯು ಸೆಂಜಿಯನ್ನು ವಶಪಡಿಸಿಕೊಂಡನು.

ಶಿವಾಜಿಯ ನಂತರ ಸೆಂಜಿಯು ರಜಪೂತರ ಸೇನಾಪತಿ ಸೊರೂಪ್‌ಸಿಂಗ್ ಎಂಬುವವನ ಹತೋಟಿಯಲ್ಲಿದ್ದಿತು. ಇವನು ಮೊಗಲರ ಸಾಮಂತನಾಗಿದ್ದು ಅವರಿಗೆ ವಾರ್ಷಿಕ ಕಪ್ಪಕಾಣಿಕೆಗಳನ್ನು ಪಾವತಿಸುತ್ತಿದ್ದನು. ಇವನ ನಂತರ ಇವನ ಮಗನಾದ ರಾಜಾದೇಸಿಂಗ್ ಆಳ್ವಿಕೆಗೆ ಬಂದನು. ಆರ್ಕಾಟಿನ ನವಾಬ ಸಾದತ್ ಉಲ್ಲಾ ಖಾನ್ ಸೆಂಜಿಯ ಮೇಲೆ ದಂಡೆತ್ತಿ ಬಂದು ರಾಜಾದೇಸಿಂಗನನ್ನು ಸೋಲಿಸಿ ಕೊಂದು ಸೆಂಜಿಯನ್ನು ಆರ್ಕಾಟಿನೊಡನೆ ಸೇರಿಸಿಕೊಂಡನು. ರಾಜಾದೇಸಿಂಗ್‌ನ ಹೆಂಡತಿ "ಸತಿಪದ್ಧತಿ" ಯನ್ನು ಅನುಸರಿಸಿ ಪ್ರಾಣ ತ್ಯಾಗ ಮಾಡಿದಳು. ಅವಳ ಸ್ಮರಣಾರ್ಥವಾಗಿ "ರಾಣಿಪೇಟೆ" ನಗರವನ್ನು

ಸಮಾಜ ವಿಜ್ಞಾನ

ನಿರ್ಮಿಸಲಾಯಿತು. ಹೀಗೆ ಸೆಂಜಿ ನಾಯಕರ ಆಳ್ವಿಕೆಯು ಮುಕ್ತಾಯಕ್ಕೆ ಬಂದಿತು.

## ತಮಿಳುನಾಡಿನಲ್ಲಿ ನಾಯಕರುಗಳ ಆಳ್ವಿಕೆ ಆಡಳಿತ ಪದ್ಧತಿ

ನಾಯಕರುಗಳು ತಮಿಳುನಾಡಿನ ಮಧುರೈ, ತಂಜಾವೂರು ಮತ್ತು ಸೆಂಜಿ ನಗರಗಳನ್ನು ಮುಖ್ಯ ಕೇಂದ್ರಗಳನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದರು. ಇದ್ನನೇ ನಾಯಕರಕಾಲ ಎಂದು ಕರೆಯುತ್ತಾರೆ.ನಾಯಕರುಗಳ ಆಳ್ವಿಕೆಯಲ್ಲಿ ತಮಿಳುನಾಡು ಹಲವಾರು ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಂಡಿತು. ನಾಯಕರುಗಳು ಉತ್ತಮ ಆಡಳಿತ ಪದ್ಧತಿಯನ್ನು ಅನುಸರಿಸಿದರು.

ರಾಜರು ನಾಡಿನ ಮುಖ್ಯಸ್ಥರಾಗಿದ್ದರು. ಅವರ ಸಹಾಯಕ್ಕಾಗಿ ಮಂತ್ರಿಗಳು ನೇಮಿಸಲ್ಪಟ್ಟಿದ್ದರು. ಸಾಮ್ರಾಜ್ಯವನ್ನು ಹಲವಾರು ಪ್ರಾಂತ್ಯಗಳಾಗಿ, ಮಂಡಲಗಳಾಗಿ, ಸೀಮೆ ಅಥವಾ ಮಾಗಾನ ಮತ್ತು ಗ್ರಾಮಗಳಾಗಿ ವಿಭಾಗಿಸಲಾಗಿತ್ತು. "ಪಾಳೆಯಗಾರ ಪದ್ಧತಿ"ಯನ್ನು ಅನುಸರಿಸುತ್ತಿದ್ದರು. ಭೂಕಂದಾಯವು ಸಾಮ್ರಾಜ್ಯದ ಆದಾಯದ ಮೂಲಾಧಾರವಾಗಿತ್ತು.

## ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ

ನಾಯಕರ ಆಡಳಿತದಲ್ಲಿ ವರ್ಣಾಶ್ರಮ ಪದ್ಧತಿಯ ಆಧಾರದ ಮೇಲೆ ಸಾಮಾಜಿಕ ಪದ್ಧತಿಯಿತ್ತು. ಜಾತಿ ಪದ್ಧತಿಯು ಕಠಿಣವಾಗಿದ್ದಿತು, ಬ್ರಾಹ್ಮಣರು ಉನ್ನತ ಸ್ಥಾನ ಹೊಂದಿದ್ದರು. ಬಲಗೈ, ಎಡಗೈನವರ ಹೋರಾಟವು ಮುಂದುವರಿದಿತ್ತು. ಗ್ರಾಮದ ಜನರು ಅಜ್ಞಾನ ಮತ್ತು ಬಡತನದಿಂದ ವಾಸಿಸುತ್ತಿದ್ದರು. ನಾಯಕರುಗಳು ವೈಗೈ ಮತ್ತು ತಾಮ್ರಪರ್ಣಿ ನದಿ ತೀರಗಳನ್ನು ಹೊರತುಪಡಿಸಿ ಬಹುತೇಕ ಬರಡು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಆರ್ಥಿಕ ಪ್ರಧಾನವಾದ ವ್ಯವಸಾಯವು ಮುಂದುವರಿದಿತ್ತು. ರೈತರು ಮಳೆಯನ್ನು ಆಶ್ರಯಿಸಿದ್ದರು. ಕೆರೆಗಳು, ಬಾವಿಗಳು, ಕಾಲುವೆಗಳು ಮತ್ತು ನದಿಗಳು ನೀರಾವರಿಯ ಮೂಲಾಧಾರವಾಗಿದ್ದವು.

## ಕಲೆ ಮತ್ತು ವಾಸ್ತು ಶಿಲ್ಪ

ನಾಯಕರುಗಳು ಕಲೆ ಮತ್ತು ವಾಸ್ತು ಶಿಲ್ಪಕಲೆಯ ಪ್ರಿಯರಾಗಿದ್ದರು. ಕಲೆ ಮತ್ತು ವಾಸ್ತುಶಿಲ್ಪ ಕಲೆಯನ್ನು ಪೋಷಿಸಿ ಬೆಳೆಸಿದರು.

## ಮಧುರೈ ನಾಯಕರು

ತಿರುನೆಲ್ವೇಲಿಯಲ್ಲಿರುವ ಕೃಷ್ಣಾಪುರಂ ದೇವಾಲಯ ಮತ್ತು ನೆಲ್ಲೈಯಪ್ಪರ್ ದೇವಾಲಯ, ತೆನ್‌ಕಾಶಿಯಲ್ಲಿರುವ ಕಾಶಿವಿಶ್ವನಾಥ ದೇವಾಲಯ, ರಾಮೇಶ್ವರಂನಲ್ಲಿರುವ ರಾಮನಾಥಸ್ವಾಮಿ ದೇವಾಲಯ ಮತ್ತು ಶ್ರೀವಿಲ್ಲಿಪುತ್ತೂರ್‌ನ ದೊಡ್ಡ ಗೋಪುರ–ಇವುಗಳು ಮಧುರೈ ನಾಯಕರ ಕಲಾ ಪೋಷಣೆಗೆ ಉತ್ತಮ ಉದಾಹರಣೆಗಳಾಗಿವೆ.

ಮಧುರೈ ವೆಳ್ಳಿಯಂಬಲಂ, ಉತ್ತರ ಮಂಟಪ, ಸಾವಿರಕಂಬಗಳ ಮಂಟಪ, ಮೂರ್ತಿಅಮ್ಮನ ಮಂಟಪ, ಸೂರ್ಯ ಮಂಟಪ ಇವುಗಳನ್ನು ಕೃಷ್ಣಪ್ಪ ನಾಯಕರು ಮಧುರೈಯಲ್ಲಿ ಜೀರ್ಣೋದ್ಧಾರ ಗೊಳಿಸಿದರು. ಮಧುರೈ ಮೀನಾಕ್ಷಿ ದೇವಾಲಯದ ಮಂಟಪಕ್ಕೆ ಚಿನ್ನದ ತಗಡುಗಳನ್ನು ಹೊದಿಸಿದ್ದರು. ತಿರುಮಲೈ ನಾಯಕರು ಪುದುಮಂಟಪ ಮತ್ತು ನಾಯಕರ ಮಹಲ್, ಮಾರಿಯಮ್ಮನ ತೆಪ್ಪದ ಕೊಳ ಇವುಗಳನ್ನು ಇಟಲಿ ವಾಸ್ತು ಶಿಲ್ಪ ಶೈಲಿಯ ಸಹಾಯದೊಡನೆ ಕಟ್ಟಿಸಿದರು. ಇದು ದ್ರಾವಿಡ, ಇಸ್ಲಾಂ ಮತ್ತು ಐರೋಪ್ಯ ಕಲಾಶೈಲಿಯ ಅಂಶಗಳನ್ನು ಒಳಗೊಂಡಿತ್ತು. ರಾಣಿ ಮಂಗಮ್ಮಾಳ್ ಮಧುರೈಯಲ್ಲಿ ಮಂಗಮ್ಮಾಳ್ ಅರಮನೆಯನ್ನು ಕಟ್ಟಿಸಿದರು.

## ತಂಜಾವೂರು ನಾಯಕರು

ತಂಜಾವೂರಿನ ಸೇವಪ್ಪನಾಯಕರು ತಮ್ಮ ಆಳ್ವಿಕೆಯ ಕಾಲದಲ್ಲಿ ಹಲವಾರು ದೇವಾಲಯಗಳನ್ನು ದುರಸ್ಥಿಗೊಳಿಸಿದರು. ತಂಜಾವೂರಿನಲ್ಲಿರುವ ಶಿವಗಂಗೆ ಕೋಟೆಯು ಸೇವಪ್ಪನಾಯಕರಿಂದಲೂ ಅಚ್ಯುತಪ್ಪ ನಾಯಕರು ಶ್ರೀರಂಗಂನಲ್ಲಿರುವ ರಂಗನಾಥ ದೇವಾಲಯ ಮತ್ತು ರಾಮೇಶ್ವರದ ರಾಮನಾಥಸ್ವಾಮಿ ದೇವಾಲಯಗಳಿಗೆ ಅಪಾರವಾದ ಕೊಡುಗೆಗಳನ್ನು ನೀಡಿದರು. ಅವರು ತಿರುವಣ್ಣಾಮಲೈ ಅರುಣಾಚ್ಚಲೇಶ್ವರ ದೇವಾಲಯದ ಗೋಪುರವನ್ನು ಕಟ್ಟಿ ಮುಗಿಸಿದರು.

## ಸೆಂಜಿಯ ನಾಯಕರು

ಸೆಂಜಿ (ಜಿಂಜಿ) ಯನ್ನು ಆಳಿದ ಅಚ್ಚುತರಾಮಭದ್ರನಾಯಕರು ತಿರುವಣ್ಣಾಮಲೈ ದೇವಾಲಯದ ಸುತ್ತುಗೋಡೆ ಗಳನ್ನು ಮತ್ತು ಬೃಹತ್ ಗೋಪುರವನ್ನು ಕಟ್ಟಿ ಮುಗಿಸಿದರು. ದಿಂಡಿವನದಲ್ಲಿ ವಿಷ್ಣು ದೇವಾಲಯವನ್ನೂ ಸಹ ಕಟ್ಟಿಸಿದರು. ಅವರು ಜೈನರಿಗೆ ಚಿತ್ತಾಮೂರ್ ಎಂಬಲ್ಲಿ ಜೈನ ದೇವಾಲಯಗಳನ್ನು ಕಟ್ಟಿಕೊಳ್ಳಲು ಅನುಮತಿ ನೀಡಿದರು.

## ಸಾಹಿತ್ಯ

ಸಾಹಿತ್ಯದ ಬೆಳವಣಿಗೆಗೆ ನಾಯಕರುಗಳು ಮಹಾನ್ ಕೊಡುಗೆಗಳನ್ನು ನೀಡಿದ್ದಾರೆ. ತಿರುಮಲೈ ನಾಯಕರು ಬರೆದ ಚಿದಂಬರಪುರಾಣ, ಪರಂಜ್ಯೋತಿಯವರು ಬರೆದ ಚಿದಂಬರಪಟ್ಟಿಯಲ್, ಹರಿದಾಸರು ಬರೆದ ಇರುಸಮಯವಿಳಕ್ಕಂ, ಉಮರುಪುಲವರ್ ಬರೆದ ಸೀರಾಪುರಾಣಂ, ಕುಮಾರಗುರುಪಾರರು ಬರೆದ ಕಂದರ್‌ಕಲಿವೆಣ್ಬಾ ಮತ್ತು ತಿರುವೆಂಕಟಂ ಬರೆದ ಮೆಯ್‌ಜ್ಞಾನವಿಳಕ್ಕಂ – ಇವುಗಳು ನಾಯಕರುಗಳ ಆಳ್ವಿಕೆಯ ಕಾಲದಲ್ಲಿ ಬರೆಯಲ್ಪಟ್ಟ ಶ್ರೇಷ್ಠ ಕೃತಿಗಳಾಗಿವೆ. ಹೀಗೆ ನಾಯಕರುಗಳ ಕಾಲವು ತಮಿಳುನಾಡಿನ ಇತಿಹಾಸದಲ್ಲಿ ವಿಶೇಷ ಸ್ಥಾನವನ್ನು ಹೊಂದಿದೆ.

## ಅಭ್ಯಾಸ

### I) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಪಾಳೆಯಗಾರರ ಪದ್ಧತಿಯನ್ನು ಪರಿಚಯಿಸಿದವರು ___________ .

   ಅ) ವಿಶ್ವನಾಥ ನಾಯಕರು   ಆ) ರಾಣಿ ಮಂಗಮ್ಮಾಳ್   ಇ) ರಘುನಾಥ ನಾಯಕರು

2. ಅರುಣಾಚ್ಚಲೇಶ್ವರ ಗೋಪುರವನ್ನು ಕಟ್ಟಿ ಮುಗಿಸಿದವರು ___________ .

   ಅ) ತಿರುಮಲೈ ನಾಯಕರು   ಆ) ಅಚ್ಚುತಪ್ಪ ನಾಯಕರು   ಇ) ವಿಜಯರಾಘವ ನಾಯಕರು

3. ಮೂಗು ಕತ್ತರಿಸುವ ಯುದ್ಧವು ___________ ಕಾಲದಲ್ಲಿ ನಡೆಯಿತು.

   ಅ) ಕೃಷ್ಣಪ್ಪ ನಾಯಕ   ಆ) ರಾಣಿ ಮೀನಾಕ್ಷಿ   ಇ) ತಿರುಮಲೈ ನಾಯಕ

4. ಉಮರುಪುಲವರ್ ಬರೆದ ಕೃತಿ ___________ .

   ಅ) ಕಂದರ್‌ಕಲಿವೆಣ್ಬಾ   ಆ) ಇರುಸಮಯ ವಿಳಕ್ಕಂ   ಇ) ಸೀರಾಪುರಾಣಂ

### II) ಬಿಟ್ಟ ಸ್ಥಳ ತುಂಬಿರಿ.

1. ವಿಶ್ವನಾಥ ನಾಯಕರು ಜಾರಿಗೊಳಿಸಿದ ತೆರಿಗೆ ___________ ಆಗಿದೆ.
2. ಮೂರು ವರ್ಷ ವಯಸ್ಸಿನ ವಿಜಯರಂಗ ಚೊಕ್ಕನಾಥರ ಪೋಷಕರು ___________ .
3. ರಾಣಿ ಮಂಗಮ್ಮಾಳ್ ತಿರುಚ್ಚಿ ಅರಮನೆಯಲ್ಲಿ ___________ ಎಂಬುವವರಿಂದ ಸೆರೆಯಲ್ಲಿಡಲ್ಪಟ್ಟಿದ್ದರು.
4. ವಿಜಯನಗರದ ಅರಸರಿಗೆ ತಾಳಿಕೋಟೆ ಯುದ್ಧದಲ್ಲಿ ಸಹಾಯ ಮಾಡಿದವರು ___________ .

### III) ಹೊಂದಿಸಿ ಬರೆಯಿರಿ.

| | | |
|---|---|---|
| 1. | ತಿರುಮಲ್ಯೆ ನಾಯಕರು | ಮೆಯ್ ಜ್ಞಾನ ವಿಳಕ್ಕಂ |
| 2. | ಪರಂಜ್ಯೋತಿಯರ್ | ಸೀರಾಪುರಾಣಂ |
| 3. | ತಿರುವೆಂಕಟ | ಚಿದಂಬರ ಪುರಾಣಂ |
| 4. | ಉಮರುಪುಲವರ್ | ಚಿದಂಬರ ಪಟ್ಟಿಯಲ್ |

### IV) ಸಂಕ್ಷಿಪ್ತವಾಗಿ ಉತ್ತರಿಸಿ.

1. ರಾಣಿ ಮಂಗಮ್ಮಾಳ್ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
2. ರಾಣಿ ಮೀನಾಕ್ಷಿ ಮತ್ತು ಚಂದಾ ಸಾಹೇಬರ ನಡುವೆ ಏರ್ಪಟ್ಟ ಘರ್ಷಣೆಯ ಬಗ್ಗೆ ಒಂದೆರಡು ಸಾಲುಗಳಲ್ಲಿ ಉತ್ತರಿಸಿ.
3. ರಾಣಿಪೇಟೆಯು ಹೇಗೆ ನಿರ್ಮಾಣವಾಯಿತು ?

### V) ವಿವರವಾಗಿ ಉತ್ತರಿಸಿ.

1. ತಿರುಮಲ್ಯೆ ನಾಯಕರ ಆಳ್ವಿಕೆಯ ಬಗ್ಗೆ ವಿವರಿಸಿ.
2. ಕಲೆ, ವಾಸ್ತು ಶಿಲ್ಪ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ನಾಯಕರುಗಳ ಕೊಡುಗೆಗಳನ್ನು ವಿವರಿಸಿ.

## ರಚನಾತ್ಮಕ ಮೌಲ್ಯಮಾಪನ

**1. ಪ್ರಬಂಧ ಬರೆಯುವಿಕೆ :**

ಮಧುರೈಗೆ ಹೊರವಲಯದ ಕೆಲಸದ ಉದ್ದೇಶದಿಂದ ಪ್ರಯಾಣಿಸಿ ತಿರುಮಲ್ಯೆ ನಾಯಕರ ಮಹಲ್ ಬಗ್ಗೆ ತಿಳಿದು ಪ್ರಬಂಧವೊಂದನ್ನು ಬರೆಯುವುದು.

**2. ನಾಟಕ–ನಟನೆ :**

ರಾಣಿ ಮಂಗಮ್ಮಾಳ್ ಚರಿತ್ರೆಯನ್ನು ನಾಟಕ ತಯಾರಿಸಿ ನಟಿಸಿ ತೋರಿಸುವುದು.

**3. ತಿಳಿದುಕೊಳ್ಳುವಿಕೆ :**

ದೇ ಸಿಂಗ್ ರಾಜನ ಚರಿತ್ರೆಯನ್ನು ಶಿಕ್ಷಕರಿಂದ ಕೇಳಿ ತಿಳಿದುಕೊಳ್ಳುವುದು.

**4. ಚಿತ್ರಮಾಲಿಕೆ (ಆಲ್ಬಂ) ತಯಾರಿಸುವುದು :**

ಸೆಂಜಿಯ ವಾಸ್ತುಶಿಲ್ಪ ಕಲೆಯ ಬಗ್ಗೆ ಚಿತ್ರಮಾಲಿಕೆಯೊಂದನ್ನು ತಯಾರಿಸುವುದು.